TIGHT BINDING BOOK

UNIVERSAL LIBRARY


OU_198591

UNIVERSAL LIBRARY

ಮಕ್ಕಳ

# ಮಹಾತ್ಮಾ ಗಾಂಧಿ

★ ಸಚಿತ್ರ ★



K2
M1

★

೧೯೩೮

★

ಕರ್ನಾಟಕ ಶಿಕ್ಷಣಸಮಿತಿ, ಧಾರವಾಡ

ಮುದ್ರಕರು:- ಜಿ. ಕೆ. ಕೇಳಕರ
ಮುದ್ರಣಾಲಯ:- ವಸಂತ ಮುದ್ರಣಾಲಯ
ಧಾರವಾಡ

( All rights reserved )

ಪ್ರಕಾಶಕರು:- ರಾ. ಶ್ರೀ. ಹುಕ್ಕೇರಿಕರ ಎಂ. ಎ.
ಕಾರ್ಯದರ್ಶಿ, ಕರ್ನಾಟಕ ಶಿಕ್ಷಣ ಸಮಿತಿ
ಮಂಗಳವಾರಪೇಟೆ, ಧಾರವಾಡ

ಕರ್ನಾಟಕದ ಶಿಕ್ಷಣ ಸಮಿತಿಯ ೬ನೆಯ ಪುಸ್ತಕ

## ಮಕ್ಕಳ

# ಮಹಾತ್ಮಾ ಗಾಂಧಿ

ಲೇಖಕ—ಶ್ರೀ ನಾರಾಯಣ ಶರ್ಮಾ

೩ನೇ ಆವೃತ್ತಿ.

೧೯೩೮. ಬೆಲೆ ೪ ಆಣೆ

# ವಿಷಯಾನುಕ್ರಮಣಿಕೆ.


| | | ಪುಟ |
|---|---|---|
| ೧ | ಹಿರಿಯರು | ೧ |
| ೨ | ತಂದೆ | ೨ |
| ೩ | ತಾಯಿ | ೪ |
| ೪ | ಚಿಕ್ಕಗಾಂಧಿ | ೬ |
| ೫ | ವಿದ್ಯಾರ್ಥಿ ಗಾಂಧಿ | ೯ |
| ೬ | ಕೆಟ್ಟ ಕೆಲಸ ಮಾಡಿದ್ದಕ್ಕಾಗಿ ಅತ್ತದ್ದು | ೧೧ |
| ೭ | ತಂದೆಯ ಸೇವೆ | ೧೪ |
| ೮ | ಮೂರು ಪ್ರತಿಜ್ಞೆಗಳು | ೧೫ |
| ೯ | ಮಿತವ್ಯಯದ ಮಂತ್ರ | ೧೭ |
| ೧೦ | ಹೊಡೆದವನನ್ನು ಕ್ಷಮಿಸಿದ್ದು | ೧೮ |
| ೧೧ | ಸತ್ಯಾಗ್ರಹ ಅಂದರೇನು ? | ೨೧ |
| ೧೨ | ಸತ್ಯಾಗ್ರಹಕ್ಕೆ ಗೆಲವು | ೨೩ |
| ೧೩ | ಸತ್ತರೂ ಸತ್ಯ ಬಿಡಲಾರೆ | ೨೫ |
| ೧೪ | ಬೇನಿಗರ ಆರೈಕೆ | ೩೦ |
| ೧೫ | ಗಾಂಧಿಯವರ ತ್ಯಾಗ | ೩೩ |
| ೧೬ | ಸಾದಾ ಇರುವಿಕೆ | ೩೫ |
| ೧೭ | ಸತ್ಯಾಗ್ರಹಾಶ್ರಮ | ೩೭ |
| ೧೮ | ಮಹಾತ್ಮರ ದಿನಚರ್ಯೆ | ೩೯ |
| ೧೯ | ದರಿದ್ರನಾರಾಯಣನನ್ನು ಕಂಡದ್ದು | ೪೨ |
| ೨೦ | ಹೊಲೆಯರು ನಮ್ಮ ಅಣ್ಣ ತಮ್ಮಂದಿರು | ೪೬ |
| ೨೧ | ಗಾಂಧಿಯವರ ಸ್ವರಾಜ್ಯ | ೪೮ |
| ೨೨ | ಅಹಿಂಸೆ | ೪೯ |

# ಪ್ರಸ್ತಾವನೆ.

---

ಮಕ್ಕಳಿರಾ !

Checked 1969

'ಮಹಾತ್ಮಾ ಗಾಂಧಿಕೀ ಜಯ' ಎಂದು ಜನರು ಹುರುಪಿನಿಂದ ಕೂಗುವದನ್ನು ನೀವು ಅನೇಕ ಸಾರೆ ಕೇಳಿರುವಿರಲ್ಲವೆ ? ಈ ಗಾಂಧಿಯವರು ಇಡೀ ಜಗತ್ತಿನಲ್ಲಿ ದೊಡ್ಡವರು. ಅವರು ನಮ್ಮ ನಾಡಿನವರು. ನಮ್ಮವರು; ಆದ್ದರಿಂದ ಅವರ ವಿಷಯಕ್ಕೆ ನಮಗೆ ಬಲು ಅಭಿಮಾನ. ಅವರಿಗೆ ಎಳೆ ಮಕ್ಕಳ ಮೇಲೆ ಬಲು ಮಮತೆ. ಮಕ್ಕಳನ್ನು ಕಂಡು ಮುದ್ದಿಡುವರು. ನಿಮ್ಮನ್ನು ಇಷ್ಟು ಪ್ರೀತಿಸುವ ಈ ಹಿರಿಯಣ್ಣನ ಜೀವನ ಕಥೆಯನ್ನು ನೀವು ಓದಿ ತಿಳಿದುಕೊಳ್ಳುವದು ಅವಶ್ಯ. ನಿಮ್ಮ ಸಲುವಾಗಿಯೇ ನಿಮ್ಮ ಸುಲಭ ಮಾತಿನಲ್ಲಿಯೇ ಈ ಕತೆಯನ್ನು ಶ್ರೀ. ನಾರಾಯಣಶರ್ಮರು ಬರೆದಿದ್ದಾರೆ. ನೀವು ಇದನ್ನು ಆಕ್ಕರೆಯಿಂದ ಎತ್ತಿಕೊಂಡು ಓದಿ ನಲಿಯುವಿರಾ ? ಹಾಗಾದರೆ ದೇವರು ನಿಮಗೆ ಕಲ್ಯಾಣ ಮಾಡುವನು.


ನಿಮ್ಮ ಅಣ್ಣ
ಸುರೇಂದ್ರ

# ಒಂದು ಮಾತು

ತಮ್ಮಗಳಿರಾ,

ನಿಮಗಾಗಿ ಅಚ್ಚುಹಾಕಿಸಿದ ಈ ಕಿರಿಹೊತ್ತಿಗೆಯ ಸಾವಿರಾರು ಪ್ರತಿಗಳನ್ನು ಕೊಂಡು ಓದಿದಿರಿ, ಓದಿ ಆನಂದಪಟ್ಟಿರಿ. ಈಗ ಅವೆಲ್ಲಾ ತೀರಿ ಹೋದವು; ನಿಮ್ಮ ಬೇಡಿಕೆಯೂ ಬಹಳವಾಗಿದೆ. ನಿಮ್ಮ ಆನಂದ ಹೆಚ್ಚಾಗಲಿ. ಇದೋ ಈಗ ಇದನ್ನು ಅಂದವಾಗಿ, ಮುದ್ದಾಗಿ ನಿಮ್ಮ ಮನ ಮೆಚ್ಚುವಂತೆ ಮತ್ತೆ ಅಚ್ಚುಹಾಕಿಸಿದ್ದೇವೆ. ಮೊದಲಿನಂತೆ ಈ ಪುಸ್ತಕವನ್ನು ಕೊಂಡು ಆನಂದ ಪಡೆಯುವಿರೆಂದು ನಂಬಿರುವ,

ಧಾರವಾಡ | ನಿಮ್ಮ ಅಣ್ಣ
೧—೬—೩೮ | ಸುರೇಂದ್ರ.





# ಮಹಾತ್ಮಾ ಗಾಂಧಿ

## ೧ ಹಿರಿಯರು

ಗಾಂಧಿಯವರ ಹಿರಿಯರು ನಮ್ಮಲ್ಲಿಯ ವೈಶ್ಯ, ಅಥವಾ ಬಣಜಿಗರಂತೆ, ಚಿಕ್ಕ ತಕ್ಕಡಿಯ ಅಂಗಡಿಕಾರರು; ಆದರೆ, ಅವರ ಮುತ್ತಜ್ಜ ಅಜ್ಜ, ತಂದೆಯವರು ಮಾತ್ರ ಕಾಠೇವಾಡದ ಕೆಲವು ಸಂಸ್ಥಾನಗಳಲ್ಲಿ ದಿವಾಣರಾಗಿದ್ದರು. ಇವರ ಅಜ್ಜ ಉತ್ತಮಚಂದ ಗಾಂಧಿಯವರು ಬಹಳ ಸತ್ಯವಂತರು. ಪೋರಬಂದರದ ಸಂಸ್ಥಾನದಲ್ಲಿ ದಿವಾಣರಾಗಿದ್ದಾಗ, ಒಮ್ಮೆ ಸುಳ್ಳಾಡುವ ಪ್ರಸಂಗ ಬಂತು; ಆಗ ಸುಳ್ಳಾಡಿ ನಾಲಿಗೆ ಮಲಿನಗೊಳಿಸಲು ಒಲ್ಲೆಂದರು. ಹಾಗು ಆ ದಿವಾನಗಿರಿಯನ್ನೇ ಬಿಟ್ಟು ಅವರು ಜುನಾಗಡ ಸಂಸ್ಥಾನ ಸೇರಿದರು; ಜುನಾಗಡದಲ್ಲಿರುವಾಗ ಅಲ್ಲಿಯ ನವಾಬನಿಗೆ ಅವರು ಎಡಗೈಯಿಂದಲೇ ಸಲಾಮು ಮಾಡುತ್ತಿದ್ದರು; ಈ ವಿಚಿತ್ರವನ್ನು ಕಂಡ

ಒಬ್ಬರು ಹೀಗೇಕೆ ? ಎಂದು ಕೇಳಲು ಉತ್ತಮ ಚಂದರು " ಬಲಗೈಯನ್ನು ಪೋರಬಂದರದ ಸಂಸ್ಥಾನಿಕರಿಗೆ ಮೀಸಲಾಗಿಟ್ಟಿರುವೆ " ಎಂದರಂತೆ !

ಇದರ ಮೇಲಿಂದ ಗಾಂಧಿಯವರ ಹಿರಿಯರು ಎಷ್ಟು ಸತ್ಯನಿಷ್ಠರು ಇದ್ದರೆಂಬುದು ತಿಳಿಯುವದು. ಬೀಜದಂತೆ ಗಿಡವೆನ್ನುವದು ಇದಕ್ಕಾಗಿಯೇ... ಇಂಥ ವರ ವಂಶದೊಳಗೆ ಮಹಾತ್ಮರಂಥವರು ಹುಟ್ಟದೆ ಮತ್ತೆಲ್ಲಿ ಹುಟ್ಟುವದು ?

## ೨. ತಂದೆ

ಉತ್ತಮಚಂದ ಗಾಂಧಿಯವರ ಹೊಟ್ಟೆಯಿಂದಲೇ ಮಹಾತ್ಮರ ತಂದೆಯವರು ಹುಟ್ಟಿದ್ದು. ಅವರ ಹೆಸರು ಕರಮಚಂದ ಗಾಂಧಿ. ಅವರಿಗೆ ಗುಜರಾಥಿ ಓದು—ಬರೆಯಲಿಕ್ಕೆ ಮಾತ್ರ ಬರುತ್ತಿತ್ತು. ಇಂಗ್ಲೀಷ ಕಲಿತವರಲ್ಲ; ಆದರೂ

ವ್ಯವಹಾರದಲ್ಲಿ ಬಹು ಚತುರರು; ಆದ್ದರಿಂದಲೇ ಅವರೂ ತಮ್ಮ ತಂದೆಯುವರಂತೆ ಪೋರಬಂದರದ ದಿವಾಣರಾದರು. ಅವರಂತೆಯೇ ಇವರಾದರೂ ಶೂರರೂ, ಉದಾರರೂ, ಸತ್ಯಮಾತಾಡುವವರೂ, ಸ್ವಾಮಿನಿಷ್ಠರೂ ಆಗಿದ್ದರು. ಸಂಸ್ಥಾನಿಕರ ಮೇಲಿನ ಅಧಿಕಾರಿಯಾದ ಏಜಂಟಸಾಹೇಬರು ಒಮ್ಮೆ ಪೋರ ಬಂದರದ ಠಾಕೂರ ಮಹಾರಾಜರನ್ನು ಅಪಮಾನ ಮಾಡಿದರು; ಆಗ ತಮ್ಮ ಮಹಾರಾಜರಿಗಾದ ಅವ ಮಾನವನ್ನು ಸಹಿಸದೆ ಏಜಂಟ ಸಾಹೇಬರನ್ನು ಚನ್ನಾಗಿ ಎದುರಿಸಿದರು; ಸಾಹೇಬರು ರೇಗಿ ಅವರಿಗೆ ಕ್ಷಮೆ ಬೇಡಿಕೊಳ್ಳಬೇಕೆಂದು ಹೇಳಿದರು. ಸತ್ಯಕ್ಕೆ ಸಾವಿಲ್ಲ. ಎಂದು ಕರಮುಚಂದರು ಕ್ಷಮೆ ಬೇಡಲಿಲ್ಲ. ಆಗ ಸಾಹೇಬರು ಕೆಲವು ತಾಸು ಇವರನ್ನು ಸೆರೆಮನೆ ಯಲ್ಲಿಟ್ಟರು. ಕೊನೆಯಲ್ಲಿ 'ಅವರು ಸಂಪನ್ನರು ಸತ್ಯಕ್ಕೆ ಸೋಲದವರು,' ಎಂದು ತಿಳಿದ ನಂತರ ಬಿಡುಗಡೆ ಮಾಡಿದರಂತೆ !

ಕರಮುಚಂದರು ಯಾರಿಗೂ ಅಂಜದವರು. ದುಡ್ಡು ಕೂಡಿಸುವದು ಅವರಿಗೆ ಸೇರುತ್ತಿದ್ದಿಲ್ಲ. ಅಂತೆಯೇ

ದಿವಾಣಗಿರಿ ಮಾಡಿದರೂ ದೊಡ್ಡ ಆಸ್ತಿಯನ್ನೇನೂ ಮಾಡಲಿಲ್ಲ. ಪುರಾಣ—ಪುಣ್ಯ ಕಥೆ ಕೇಳುವದರಲ್ಲಿ ಅವರಿಗೆ ಬಹಳ ಆಸೆ. ಧರ್ಮದಲ್ಲಿ ಬಹಳ ಭಕ್ತಿ, ದೇವರಲ್ಲಿ ಅತ್ಯಂತ ವಿಶ್ವಾಸ. ದೇವರ ಪೂಜೆಯ ಕಾಲಕ್ಕೆ ದಿನಾಲು ಅವರು ಭಗದ್ಗೀತೆಯ ಕೆಲವು ಶ್ಲೋಕಗಳನ್ನಾದರೂ ತಪ್ಪದೆ ಅನ್ನುತ್ತಿದ್ದರು.

---

## ೩. ತಾಯಿ

ಗಾಂಧೀಜಿಯವರ ತಾಯಿಯ ಹೆಸರು ಪುತಳೀಬಾಯಿ. ಹಳೆಯ ಕಾಲದ ಹೆಣ್ಣು ಮಗಳು. ಬಹು ಆಚಾರಶೀಲರು, ವ್ರತ-ನಿಯಮಾದಿಗಳನ್ನು ಮಾಡುವವರು. ಮನೆಯಲ್ಲಿ ಬೇಕಾದಷ್ಟು ಸುಖಪಡುವ ಸಾಧನಗಳಿದ್ದರೂ, ಅತ್ತ ಕಣ್ಣು ಹಾಕದೆ ಅವರು ದಿನದ ವೇಳೆಯನ್ನೆಲ್ಲ ವಾಡಿಕೆಯಾಗಿ ದೇವರ ಪೂಜೆಯಲ್ಲಿ ದೇವಸ್ಥಾನಕ್ಕೆ ಹೋಗುವದರಲ್ಲಿ, ಪುರಾಣ ಕೇಳುವದರಲ್ಲಿ ಕಳೆಯುತ್ತಿದ್ದರು; ಇದರಿಂದ ಅವರಿಗೆ ಊಟದ ಕಡೆಗೆ ಲಕ್ಷ್ಯವೇ ಇರುತ್ತಿ

ರಲಿಲ್ಲ. ವ್ರತೋಪವಾಸಗಳೆಂದರೆ, ಅವರ ಜೀವಕ್ಕೆ ನಿಜವಾದ ಸಮಾಧಾನ. ಚಾತುರ್ಮಾಸದ ಪ್ರತಿದಿನ ಒಂದೇ ಹೊತ್ತು ಊಟ ಮಾಡುತ್ತಿದ್ದರು; ಆ ನಾಲ್ಕು ತಿಂಗಳು ಕೆಲವು ದಿನ ಸೂರ್ಯದರ್ಶನವಿಲ್ಲದೆ ಅವರೆಂದೂ ಉಣ್ಣುತ್ತಿರಲಿಲ್ಲ. ಆಷಾಡ ಶ್ರಾವಣ ಮಾಸಗಳಲ್ಲಿ ಸೂರ್ಯದರ್ಶನವು ಅಪರೂಪವಷ್ಟೇ ? ಆಗ ಸೂರ್ಯನು ಮೋಡದೊಳಗಿಂದ ಹೊರಗೆ ಬಂದೊಡನೆ ನನಗೆ ಹೇಳಿರಿ ಎಂದು ಅವರು ಮಕ್ಕಳಿಗೆ ಹೇಳಿಡುತ್ತಿದ್ದರು. ಸೂರ್ಯನು ಈಗ ಬಂದಾನು ಆಗ ಬಂದಾನು ಎಂದು ಕಾಯುತ್ತ ಕುಳಿತ ಹುಡುಗರು ಸೂರ್ಯನು ಕಂಡ ಕೂಡಲೆ "ಅವ್ವಾ ಸೂರ್ಯ ಬಂದ" ಎಂದು ಲಗು ಬಗೆಯಿಂದ ಹೇಳಹೋಗುತ್ತಿದ್ದರು. ಅಷ್ಟರಲ್ಲಿ ಮತ್ತೆ ಸೂರ್ಯನು ಮೋಡಗಳ ಹಿಂದೆ ಮರೆಯಾಗುತ್ತಿದ್ದ; ಆಗ ಅವರ ತಾಯಿಯು ಹೊರಗೆ ಬಂದು "ಆಗಲಿ ನಾನು ಉಣ್ಣಬೇಕೆಂದು ದೇವರ ಇಷ್ಟವಿಲ್ಲ." ಎಂದು ಸ್ವಲ್ಪಾದರೂ ಮೋರೆಸೊಟ್ಟ ಮಾಡದೆ, ಆನಂದದಿಂದ ಒಳಗೆ ಹೋಗುತ್ತಿದ್ದರು. ಒಂದು ಸಾರೆ ಚಾಂದ್ರಾಯಣ ವ್ರತ ಮಾಡುತ್ತಿರುವಾಗ ಬೇನೆ ಬಿದ್ದರು, ಆದರೂ

ಅವರು ಹಿಂಜರಿಯದೆ ನಿಶ್ಚಯದಿಂದ ವ್ರತ ಕೊನೆಗಾಣಿಸಿಯೇ ಬಿಟ್ಟರಂತೆ ! ಇಂಥ ಪುಣ್ಯವಂತ—ಪವಿತ್ರ ಮನಸ್ಸಿನ ತಾಯಿಯನ್ನು ಪಡೆದವರು ಮಹಾತ್ಮರಾಗುವದರಲ್ಲಿ ಸಂದೇಹವೇನು ?

---

## ೪. ಚಿಕ್ಕ ಗಾಂಧಿ

ಇಂಥ ತಾಯಿ ತಂದೆಗಳಿಂದ ಗಾಂಧಿಯವರು ಪೋರಬಂದರದಲ್ಲಿ ಹುಟ್ಟಿದರು. ಸಣ್ಣವರಿರುವಾಗ ಅವರ ಜಾಣತನ ಅಷ್ಟೊಂದು ಕಂಡು ಬರಲಿಲ್ಲ; ಅಂಕಿ-ಮಗ್ಗಿಗಳನ್ನು ಕಲಿಯುವದು ಅವರಿಗೆ ಕಷ್ಟವಾಯಿತಂತೆ ! ಹೀಗೆ ಇದ್ದಗ್ಯೂ, ಒಂದು ದಿನ ಕೂಡ ಅವರು ಸಾಲೆ ತಪ್ಪಿಸಲಿಲ್ಲ. ಗಂಟೆ ಹೊಡೆಯುವ ಹೊತ್ತಿಗೆ ಸಾಲೆಯಲ್ಲಿರುತ್ತಿದ್ದರು; ಸಾಲೆ ಬಿಟ್ಟ ಕೂಡಲೆ ಮನೆಗೆಬರುತ್ತಿದ್ದರು. ತಾವಾಯಿತು,





ತಮ್ಮ ಅಭ್ಯಾಸವಾಯಿತು. ಇನ್ನೊಬ್ಬರ ಗೊಡವೆಗೆ ಹೋಗುತ್ತಿರಲಿಲ್ಲ. ಪುಸ್ತಕಗಳೇ ಅವರ ಗೆಳೆಯರು.

ಅಭ್ಯಾಸದಲ್ಲಿ ಹೇಳಿಕೊಳ್ಳುವಂತೆ ಅವರು ಚುರುಕು ಇದ್ದಿಲ್ಲ. ಆದರೇನು ? ಅವರ ಬಾಯಿಂದ ಸುಳ್ಳು ಎಂದೂ ಹೊರಬೀಳಲಿಲ್ಲ. ಗಾಂಧಿಯವರು ತಮ್ಮದೇ ಒಂದು ಚರಿತ್ರ ಬರೆದಿದ್ದಾರೆ; ಅದರಲ್ಲಿ ' ನನ್ನ ಗುರುಗಳಿಗಾಗಲಿ, ಗೆಳೆಯರಿಗಾಗಲಿ ಎಂದೂ ಸುಳ್ಳು ಹೇಳಿದಂತೆ ನನಗೆ ನೆನಪಿಲ್ಲ ' ಎಂದು ಬರೆದಿರುವರು. ಈಗ ಇಂಥ ವಿದ್ಯಾರ್ಥಿಯನ್ನು ಕಾಣಬಹುದೆ ? ಧರ್ಮರಾಜನ ಒಂದು ಕಥೆ ಇಲ್ಲಿ ಹೇಳುವೆ. ಪಾಂಡವರ ಧರ್ಮರಾಜನು ಚಿಕ್ಕಂದಿನಲ್ಲಿ ಎಲ್ಲರೊಡನೆ ಪಾಠಶಾಲೆಯಲ್ಲಿ ಕಲೆಯುತ್ತಿದ್ದ; ಆಗ ಒಂದು ದಿನ ಗುರುಗಳು ಎಲ್ಲ ಹುಡುಗರಿಗೆ " ನಿಮಗೆಷ್ಟು ಪಾಠಗಳು ಚನ್ನಾಗಿ ಬರುತ್ತವೆ ? " ಎಂದು ಕೇಳಿದರಂತೆ ! ಅದಕ್ಕೆ ಎಲ್ಲ ಹುಡುಗರು ' ಆದಷ್ಟೂ ಪಾಠಗಳೆಲ್ಲಾ ಬರುತ್ತವೆ ' ಅಂದರು. ಧರ್ಮರಾಜನನ್ನು ಕೇಳಲಾಗಿ ' ಮೊದಲನೆಯ ಒಂದು ಪಾಠ ಮಾತ್ರ ಚನ್ನಾಗಿ ಕಲಿತಿರುವೆನು ' ಎಂದು ಹೇಳಿದನು.

ಮೊದಲನೆ ಪಾಠದಲ್ಲಿ ' ಪ್ರತಿಯೊಬ್ಬರೂ ಸತ್ಯವನ್ನೇ ನುಡಿಯಬೇಕು ' ಎಂದು ಇತ್ತು; ಧರ್ಮರಾಜನು ಆ ಪಾಠವನ್ನು ಓದಲಿಕ್ಕಷ್ಟೇ ಕಲಿಯದೆ, ಸತ್ಯವನ್ನೇ ಮಾತಾಡಬೇಕೆಂಬುದನ್ನೂ ಪೂರಾ ಕಲಿತಿದ್ದನು. ಅದರಿಂದ ಅವನು ' ಅದೊಂದೇ ಪಾಠ ಬರುತ್ತದೆ. ' ಎಂದು ಹೇಳಿದನು. ಆಗ ಧರ್ಮರಾಜನ ಈ ಮಾತು ಕೇಳಿ ಗುರುಗಳು ' ಪಾಠ ಕಲಿತರೆ ಹೀಗೆ ಕಲಿಯಬೇಕು. ' ಎಂದು ಹೇಳಿದರಂತೆ! ಇದನ್ನು ನೆನಸಿಕೊಂಡರೆ, ಗಾಂಧಿಯವರು ಕಲಿಯುಗದ ಧರ್ಮರಾಜರೆಂದೇ ಯಾರಿಗಾದರೂ ತೋರಬಹುದಲ್ಲವೇ ?

ಒಮ್ಮೆ ಅವರು ಇಂಗ್ಲೀಷ ಶಾಲೆಯಲ್ಲಿದ್ದಾಗ ಪರೀಕ್ಷೆಗಾಗಿ ಸಾಹೇಬರು ಬಂದು ಎಲ್ಲರಿಗೂ ಐದು ಇಂಗ್ಲೀಷ ಶಬ್ದಗಳನ್ನು ಬರೆಯ ಹೇಳಿದರು; ಅವುಗಳಲ್ಲಿ ಒಂದು ಶಬ್ದವನ್ನು ಗಾಂಧಿಯವರು ತಪ್ಪಿದ್ದರಿಂದ ಮಾಸ್ತರರು ಅದು ತಪ್ಪಿರುವದೆಂದು ತಮ್ಮ ಕಾಲು ಸೊನ್ನೆಯಿಂದ ತಿಳಿಸಿದರು. ಗಾಂಧಿಯವರು ಮಗ್ಗುಲಿನಲ್ಲಿಯ ಹುಡುಗರು ಬರೆದಿದ್ದನ್ನು ನೋಡಿ ಬರೆಯಲಿಲ್ಲ; ಮುಂದಿ ದಡ್ಡನು ಎಂದರೂ ಚಿಂತೆಯಿಲ್ಲ; ನೋಡಿಕೊಂಡು ಬರೆದು ಜಾಣ ಅನಿಸಿ

ಕೊಳ್ಳುವದು ಸರಿಯಲ್ಲವೆಂದರು. ಜಾಣ ಎನಿಸಿಕೊಳ್ಳುವದು ಸುಲಭ; ಸತ್ಯವಂತ ಎನಿಸಿಕೊಳ್ಳುವದು ದುರ್ಲಭ.

---

## ೫. ವಿದ್ಯಾರ್ಥಿ ಗಾಂಧಿ

ಸಾಲೆಯಲ್ಲಿರುವಾಗ ಮಾಸ್ತರರಿಂದ ಬೈಸಿಕೊಳ್ಳುವದು ಬಡಿಸಿಕೊಳ್ಳುವದು ಗಾಂಧಿಯವರಿಗೆ ಸರಿಬರುತ್ತಿರಲಿಲ್ಲ; ಆದ್ದರಿಂದ ದಿನದ ಪಾಠಗಳನ್ನು ತಪ್ಪದಂತೆ ಓದಿಕೊಂಡು ಇಟ್ಟುಕೊಳ್ಳುವದೇ ಅವರ ಮೊದಲನೇ ಕೆಲಸ; ಒಂದು ದಿನ ಗಾಂಧಿಯವರು ತಮ್ಮ ತಂದೆ ಓದುತ್ತಿದ್ದ "ಶ್ರವಣಪಿತೃಭಕ್ತಿ" ಎಂಬ ಪುಸ್ತಕವನ್ನು ಓದಿದರು; ಇದೇ ವೇಳೆಯಲ್ಲಿ ಶ್ರವಣನು ತನ್ನ ತಾಯಿ ತಂದೆಗಳನ್ನು ಜೋಳಿಗೆಯಲ್ಲಿ ಹಾಕಿ ಹೊತ್ತುಕೊಂಡು ಕಾಶಿಯ ಯಾತ್ರೆಗೆ ಹೋಗುವದನ್ನು ಗೊಂಬೆ ಆಟದಲ್ಲಿ ನೋಡಿ

ದರು. ಇದರಿಂದ ಅವರ ಮನಸು ಕರಗಿ "ನಾನೂ ಹೀಗೇ ತಾಯಿ ತಂಪೆಗಳ ಸೇವೆ ಮಾಡಬೇಕು" ಎಂದು ಮನಸುಮಾಡಿದರು. ಶ್ರವಣನು ತೋರಿಸಿದ ತಾಯಿ ತಂದೆಗಳ ಭಕ್ತಿಯು ಅವರಲ್ಲಿ ಮನೆಮಾಡಿತು. ಮುಂದೆ ಸ್ವಲ್ಪ ದಿನಗಳಲ್ಲಿ ಒಂದು ನಾಟಕ ಕಂಪನಿಯು ಬಂತು. ಅವರು ಹರಿಶ್ಚಂದ್ರ ನಾಟಕ ಆಡುತ್ತಿದ್ದರು. ತಂದೆಯವರ ಅಪ್ಪಣೆಯಿಂದ ಗಾಂಧಿಯವರು ಹರಿಶ್ಚಂದ್ರ ನಾಟಕ ನೋಡಲಿಕ್ಕೆ ಹೋದರು; ಮನಸು ದಣಿಯಲಿಲ್ಲ. ಎರಡನೇಸಾರೆ ಹೋದರು; ಆದರೂ ಸಾಕು ಅನಿಸಲಿಲ್ಲ. ಅದನ್ನು ಬಿಟ್ಟೂಬಿಡದೆ ನೋಡಬೇಕೆಂಬ ಹುಚ್ಚು ಆಸೆ ಬಿಡಲಿಲ್ಲ. 'ಎಲ್ಲರೂ ಹರಿಶ್ಚಂದ್ರನಂತೆ ಸತ್ಯವಂತರಾಗಿ ಕಷ್ಟಪಡಬಾರದೇಕೆ' ? ಎಂದುಕೊಂಡು ಅವನು ಪಟ್ಟ ಕಷ್ಟಕ್ಕಾಗಿ ಆಗಾಗ ಕಣ್ಣೀರು ಸುರಿಸುವರು ? ಅಂದಿನಿಂದ ಸತ್ಯಕ್ಕಾಗಿ ಹರಿಶ್ಚಂದ್ರನಂತೆ ತಾವೂ ಕಷ್ಟಪಡಲೇಬೇಕೆಂದು ಗೊತ್ತು ಮಾಡಿದರು.

# ೬. ಕೆಟ್ಟ ಕೆಲಸ ಮಾಡಿದ್ದಕ್ಕಾಗಿ ಅತ್ತದ್ದು.

ಚಿಕ್ಕಂದಿನಲ್ಲಿ ಕೆಟ್ಟ ಹುಡುಗರ ಚಾಳಿಯು ಯಾರಿಗೂ ತಪ್ಪಿದ್ದಲ್ಲ; ಗಾಂಧಿಯವರು ಚಿಕ್ಕಂದಿನಲ್ಲಿ ಸುಳ್ಳಾಡಬಾರದು ಕೆಟ್ಟ ಕೆಲಸಮಾಡಬಾರದು ಎಂದು ಎಷ್ಟು ಮನಸು ಗಟ್ಟಿ ಮಾಡಿದ್ದರೂ, ಇಂಗ್ಲೀಷ ಸಾಲೆಗೆ ಹೋಗುವಾಗ ಅವರಿಗೊಬ್ಬ ಕೆಟ್ಟ ಚಾಳಿಯ ಗೆಳೆಯ ಗಂಟುಬಿದ್ದ. ಅವನು ಅವರ ದೂರಿನ ಆಪ್ತ. ಅವನಿಂದ ಕಂಡ ತಿನಸುಗಳನ್ನು ತಿನ್ನುವ, ಬೀಡಿ ಸೇದುವ ಚಟ ಹತ್ತಿದವು. ಬೀಡಿ ಸೇದುವದಕ್ಕಿಂತಲೂ ಎಲ್ಲರಂತೆ ತಾವೂ ಬಾಯಿಂದ ಹೊಗೆಬಿಟ್ಟು ಮೋಜು ನೋಡಬೇಕು ಎಂದೇ ಅವರ ಮನಸು; ಆದರೆ ದುಡ್ಡು ಎಲ್ಲಿಂದ ಬರಬೇಕು? ಒಂದು ದಿನ ಈ ಚಟಕ್ಕಾಗಿ ತಮ್ಮ ಮನೆಯ ಸಿಪಾಯಿಯ ಕಿಸೆಯಿಂದ ಕೆಲ ಆಣೆಗಳನ್ನು ಕದ್ದರು; ಹೀಗೆ ಕೆಟ್ಟ ಕೆಲಸ ಮಾಡುತ್ತಿದ್ದಾಗ ಸಹ ಅವರಿಗೆ ಇದು ಕಳವು

ಇದು ಪಾಪ ಎಂದು ಮನಸ್ಸು ಹೇಳುತ್ತಿತ್ತು; ಆದರೂ ಅದನ್ನು ಲಕ್ಷಿಸದೆ ಈ ಚಟಗಳು ಬೆಳೆದವು. ಇದಕ್ಕಾಗಿ ಅಂಗಡಿಯಲ್ಲಿ ಸಾಲವೂ ಆಯಿತು; ಆ ಸಾಲಕ್ಕಾಗಿ ಅಂಗಡಿಕಾರನು ಬೆನ್ನು ಹತ್ತಿದನು; ಮನೆಯವರಿಗೆ, ಈ ಸುದ್ದಿ ತಿಳಿಯಬಾರದೆಂದು ಅಣ್ಣನ ಕೈಯಲ್ಲಿದ್ದ ಬಂಗಾರದ ಖಡೆಯ ತುಂಡನ್ನು ಕತ್ತರಿಸಿ ಕೊಟ್ಟರು. ಮೊದಲೇ ಪಾಪಕ್ಕೆ ಅಂಜುವ ಮನಸ್ಸು; ತಮ್ಮಿಂದ ಇಂಥ ಪಾಪದ ಕೆಲಸ ಆಯಿತಲ್ಲ ಎಂದು ಮನಸು ಕುದಿಯಹತ್ತಿತು; ಒಳಗಿಂದೊಳಗೆ ಚುಚ್ಚಹತ್ತಿತು. ಇನ್ನು ಮುಂದೆ ಇಂಥ ಪಾಪದ ಕೆಲಸ ಮಾಡಬಾರದೆಂದು ದೇವರ ಆಣೆ ಮಾಡಿದರು; ಆದರೂ ಮನಸು ನಿಲ್ಲದೆ ತಂದೆಯವರ ಮುಂದೆ ತಮ್ಮಿಂದಾದ ತಪ್ಪನ್ನು ಹೇಳಬೇಕು; ಇಲ್ಲದಿದ್ದರೆ ಆ ಪಾಪ ತೊಳೆದು ಹೋಗಲಾರದು, ತಂದೆಯವರು ಬೇಕಾದ ಶಿಕ್ಷೆಯನ್ನು ಮಾಡಲಿ ಎಂದು ನಿಶ್ಚಯ ಮಾಡಿದರು; ಆದರೆ ಅವರಿಗೆ ಬಾಯಿಯಿಂದ ತಿಳಿಸಲು ಧೈರ್ಯವಾಗಲಿಲ್ಲ. ಒಂದು ಕಾಗದದಲ್ಲಿ ಆದ ಸಂಗತಿಯನ್ನೆಲ್ಲ ಬರೆದು "ನನ್ನನ್ನು ಇದೊಂದು ಬಾರಿ ಕ್ಷಮಿಸಬೇಕು. ಇನ್ನು ಮುಂದೆ ಇಂಥ ಕೆಲಸ ಮಾಡಲಾರೆ" ಎಂದು

ವೆಗೆ ಬೇಡಿಕೊಂಡರು. ಅವರ ಕೈಯಲ್ಲಿ ಕಾಗದ
ಡುವಾಗ ಗಾಂಧಿಯವರ ಕೈ-ಮೈ ನಡುಗಿತು;
ರೂ ಮಾಡಿದ್ದನ್ನು ಉಣ್ಣಲೇಬೇಕೆಂದು ಸುಮ್ಮ
ರು. ತಂದೆಯವರಿಗೆ ಆಗ ಮೈಯಲ್ಲಿ ಜಡ್ಡು.
ಳುತ್ತ ಮಲಗಿದ್ದರೂ, ಅವರು ಅದನ್ನು ಓದಿದರು.
ಣ್ಣಗಳಿಂದ ಹತ್ತೆಂಟು ಹನಿಗಳು ಪಟಪಟನೆ ಕಾಗ
ಮೇಲೆ ಉದುರಿದವು. ಅದನ್ನು ನೋಡಿ ಗಾಂಧಿ
ವರಿಗೂ ಅಳು ಬಂತು. ತಂದೆಯವರ ಮುಂದೆ
ೀ ಅತ್ತರು. ಮಾಡಿದ ಪಾಪವೆಲ್ಲ ಹೊರಬಿದ್ದ
ೀರಿನಿಂದ ಹರಿದು ಹೋಯಿತು. ತಂದೆ ಅವರನ್ನು
ುಸಿದ್ದಲ್ಲದೆ, ಹೆಚ್ಚು ಪ್ರೀತಿಸಹತ್ತಿದರು. ತಂದೆ
ಷ್ಟು ದೊಡ್ಡದಾದ ತಮ್ಮ ತಪ್ಪನ್ನು ಕ್ಷಮಿಸಿ
ಂದು ಗಾಂಧಿಯವರಿಗೆ ವಸ್ತುಪಾಠವೇ ಆಯಿತು.

# ೭. ತಂದೆ

ತಾಯಿತಂದೆಗಳ ಸೇವೆಗೆ ಗಾಂಧಿಯವರ ಕೈಗಳು ಯಾವಾಗಲೂ ಮುಂದೆ. ಮನಸ್ಸಿಗೆ ಹಿಗ್ಗು. ಅವರ ತಂದೆಯವರು ಮುಪ್ಪಿನ ಕಾಲಕ್ಕೆ ಬೇನೆಯಿಂದ ಹಾಸಿಗೆ ಹಿಡಿದಿದ್ದರೆಂದು ಹಿಂದೆಯೇ ಹೇಳಿದೆ. ಈಗ ಗಾಂಧಿಯವರ ವಯಸ್ಸು ಹದಿನ್ನಾರು. ಹಾಯಸ್ಕೂಲಿನಲ್ಲಿ ಓದುತ್ತಿದ್ದರು; ಶಾಲೆಯ ಅಭ್ಯಾಸ ಬಹಳ ಇದ್ದರೂ ಅವರೆಂದೂ ತಂದೆಯವರ ಸೇವೆಗೆ ಮೈಗಳ್ಳತನ ಮಾಡುತ್ತಿರಲಿಲ್ಲ. ಬೆಳಿಗ್ಗೆ ಅವರ ಹುಣ್ಣಿನ ಗಾಯವನ್ನು ತಾವೇ ತೊಳೆದು ಅದಕ್ಕೆ ಔಷಧ ಹಾಕಿ ಕಟ್ಟುವದು, ಔಷಧಕೊಡುವದು, ಪ್ರತಿ ದಿನ ರಾತ್ರಿಯಲ್ಲಿ ತಂದೆಯವರ ಕಾಲು ಒತ್ತುವದು, ಅವರು ಹೋಗು ಅಂದಾಗ ಮಲಗಲಿಕ್ಕೆ ಹೋಗುವದು, ಹೀಗೆ ತಪ್ಪದೆ ಅವರ ಅಪ್ಪಣೆಯಂತೆ ನಡೆಯುತ್ತಿದ್ದರು. ಸಂಜೆಗೆ ಕೂಡ ಅವರ ಅಪ್ಪಣೆ ಪಡೆದುಕೊಂಡೇ ತಿರುಗಾಡಲು ಹೋಗುತ್ತಿದ್ದರು. ಅವರು ಬೇಡ ಅಂದರೆ ಬಿಡುತ್ತಿದ್ದರು. ತಂದೆಯವರ ಸೇವೆ

ಸಾಕೆಂದು ಅವರ ಮನಸು ಎಂದೂ ಅಸಹ್ಯ ಪಡಲಿಲ್ಲ ಅಥವಾ ಬೇಸರಗೊಳಲಿಲ್ಲ. ಶ್ರವಣನ ಭಕ್ತಿಯ ಕತೆಯನ್ನು ಕೇಳಿ, ಈ ಮೊದಲೇ ತಾಯಿತಂದೆಗಳ ಸೇವೆಯಲ್ಲಿ ಮೈಯನ್ನು ಸವೆಯಿಸಬೇಕೆಂದು ನಿಶ್ಚಯ ಮಾಡಿದ್ದರು. ಅವರಿಗೀಗ ಸೇವೆಯ ಸುಗ್ಗಿ ದೊರೆಯಿತು; ಅವರನ್ನು ಮನಸಿನಿಂದ ಸೇವಿಸಿ 'ದೊಡ್ಡವನಾಗಪ್ಪ ಕೀರ್ತಿವಂತನಾಗಪ್ಪಾ' ಎಂದು ಆಶೀರ್ವಾದ ಪಡೆದರು. ತಂದೆಯವರ ಆಶೀರ್ವಾದವು ವ್ಯರ್ಥವಾಗುವದೇ ಎಂದಾದರೂ?

---

## ೮ ಮೂರು ಪ್ರತಿಜ್ಞೆಗಳು

ತಂದೆ ತಾಯಿ ಅಂದರೆ ದೇವರು. ಅವರ ಮಾತು ಮೀರಬಾರದು; ಅವರ ಸೇವೆಗೆ ತಪ್ಪಬಾರದು. ಎಂದು ಮಾತಾಡುವವರು ಬಹಳ;

ಮಾಡುವವರು ಕಡಿಮೆ. ಗಾಂಧಿಯವರು ಹಾಗಲ್ಲ. ಅವರು ಯಾವಾಗಲೂ ನುಡಿದಂತೆ ಮಾಡುವವರು; ಕೈಯಿಂದ ಆಗದಿದ್ದರೆ ಯತ್ನಿಸುವವರು; ಹೀಗೆ ಯತ್ನಿಸಿಯೇ ಅವರು ದೊಡ್ಡವರಾದರು. ಬ್ಯಾರಿಸ್ಟರ ಪರೀಕ್ಷೆಗಾಗಿ ವಿಲಾಯತಿಗೆ ಹೋಗುವ ಸಮಯದಲ್ಲಿ ಗಾಂಧಿಯವರ ತಾಯಿಗೆ ಬಹಳ ಚಿಂತೆ ಆಯಿತು. 'ಪರದೇಶಕ್ಕೆ ಮಗನನ್ನು ಹೇಗೆ ಕಳಿಸುವದು? ಮಾಂಸ ತಿಂದು, ಸೆರೆ ಕುಡಿದು, ಎಲ್ಲಾದರೂ ಕುಲಗೆಟ್ಟರೆ ಏನು ಮಾಡಬೇಕು?' ಎಂದು ದಿನಾಲು ಹಲಬುವರು. ವಿಲಾಯತಿಗೆ ಹೋಗುವವರೆಲ್ಲ ಕೆಟ್ಟು ಹಾಳಾಗುವರೆಂದು ಅವರ ನಂಬಿಗೆ; ಆದ್ದರಿಂದ 'ಅವರಂತೆಯೇ ನೀನೂ ಆದರೆ ನಾನೇನು ಮಾಡಲಿ' ಎಂದು ಪುತಳಾಬಾಯಿ ಗಾಂಧಿಯವರನ್ನು ಕೇಳಿದರು; ಆಗ ಅವರು "ಅವ್ವಾ, ನನ್ನ ನಾಲಿಗೆಯನ್ನು ನೀನು ನಂಬುವಿಯಾದರೆ 'ನಿನ್ನ ಆಜ್ಞೆಯಂತೆ ನಾನು ಮಾಂಸ, ಸೆರೆ, ಹೆಂಣು ಈ ಮೂರನ್ನೂ ಕೈಯಿಂದ ಕೂಡ ಮುಟ್ಟಲಾರೆ" ಎಂದು ತಾಯಿಯ ಮುಂದೆ ಆಣೆ ಮಾಡಿದರು; ಮತ್ತು ಆ ಮಾತನ್ನು ಕಡೆತನಕ ನಡಿಸಿದರು. ಇದಕ್ಕನ್ನಬೇಕು ಮಾತೃಭಕ್ತಿ ಎಂದು!

## ೯ ಮಿತವ್ಯಯದ ಮಂತ್ರ

ಗಾಂಧಿಯವರು ವಿಲಾಯತಿಗೆ ಹೋದ ಬಳಿಕ ಅಲ್ಲಿಯ ನಡತೆಯಂತೆಯೇ ರೂಪಾಯಿ ಖರ್ಚುಮಾಡಿದರು; ಆದರೆ ಹೀಗೆ ಪ್ರತಿಯೊಂದಕ್ಕೂ ದುಡ್ಡು ಸುರುವುತ್ತ ಕುಳಿತರೆ, ದುಡ್ಡು ಎಲ್ಲಿಂದ ಬರುಬೇಕು ? ಎಂದು ಅವರು ಸ್ವಂತ ಕೈಯಿಂದಲೇ ಅಡಿಗೆಯನ್ನು ಮಾಡಿಕೊಂಡು ಉಣ್ಣಹತ್ತಿದರು. ಇದರಿಂದ ನೀರಿನಂತೆ ಖರ್ಚಾಗುವ ದುಡ್ಡು ಉಳಿಯಿತು; ಅಲ್ಲದೆ ಸುಖವೂ ದೊರಯಿತು; ಅಂದಿನಿಂದ ಅವರು ಒಣ ಗೊಂದಲಕ್ಕೆ ಹೋಗದೆ ತಮ್ಮ ಹಾಸಿಗೆ ಇದ್ದಷ್ಟು ಕಾಲು ಚಾಚಬೇಕೆಂಬ ಪಾಠ ಕಲಿತರು. ಆದಷ್ಟು ಕಡಿಮೆ ಖರ್ಚಿನಿಂದ ತಮ್ಮ ಹೊಟ್ಟೆ ಬಟ್ಟೆ ನಡೆಯುವಂತೆ ಸಾದಾ ರೀತಿಯಿಂದ ಇರತೊಡಗಿದರು. ಇದರಿಂದ ಅವರಿಗೆ ಕೈಕಾಯ್ದು ಖರ್ಚು ಮಾಡುವ ರೂಢಿ ಆಯಿತು. ಪ್ರತಿಯೊಂದು ಕಾಸಿನ ಲೆಖ್ಖವನ್ನು ಹಚ್ಚಿಟ್ಟು ಮಲಗುವ ಹೊತ್ತಿನಲ್ಲಿ, ಈ

ಹೊತ್ತು ಯಾವುದರಲ್ಲಿ ಖರ್ಚು ಹೆಚ್ಚಾಯಿತು ಕಡಿಮೆ ಆಯಿತು ಎಂಬುದನ್ನು ನೋಡಿಕೊಂಡೇ ಮಲಗುವರು. ಇಂದಿಗೂ ಅವರು ತಮ್ಮ ಕೈಗೆ ಬರುವ ಒಂದು ಕಾಸಿನ ಲೆಖ್ಖವನ್ನೂ ಬರೆದಿಡುವರು; ಅದರಿಂದ ಲಕ್ಷಾವಧಿ ರೂಪಾಯಿಗಳ ವ್ಯವಹಾರವನ್ನು ತಪ್ಪದೆ ನಡಿಸುತ್ತಿರುವರು. ಕೈ ಬಿಟ್ಟು ಹೋದ ಪ್ರತಿಯೊಂದು ದುಡ್ಡಿನ ಲೆಖ್ಖವನ್ನಿಟ್ಟರೆ, ಮತ್ತು ಮೊದಲೇ ಈ ವಸ್ತುವು ಬೇಕು-ಬೇಡ ಎಂಬುದನ್ನು ವಿಚಾರ ಮಾಡಿಕೊಂಡರೆ, ಯಾರಿಗೂ ದುಡ್ಡು ಕಳಕೊಳ್ಳುವ ಪ್ರಸಂಗ ಬರಲಿಕ್ಕಿಲ್ಲ ಎಂದು ಎಲ್ಲರಿಗೂ ಗಾಂಧಿಯವರ ಉಪದೇಶ.

---

## ೧೦ ಹೊಡೆದವನನ್ನು ಕ್ಷಮಿಸಿದ್ದು

ಗಾಂಧಿಯುವರು ದಕ್ಷಿಣ ಆಫ್ರಿಕಕ್ಕೆ ವಕೀಲಿ ಮಾಡಲಿಕ್ಕೆಂದು ಹೋಗಿದ್ದಾಗ ಪ್ರಿಟೋರಿಯಾ ಊರಲ್ಲಿ ಒಂದು ದಿನ ಬೀದಿಗುಂಟ ನಡೆದಿ

ದ್ದರು. ಈ ದಾರಿಯಲ್ಲಿಯೇ ಆ ಪ್ರಾಂತದ ಮುಖ್ಯ ಮಂತ್ರಿಯ ಮನೆ; ನೋಡಲಿಕ್ಕೆ ದೊಡ್ಡವರ ಮನೆ ಎಂದು ಅದು ಕಾಣಿಸುತ್ತಿರಲಿಲ್ಲ; ಅಲ್ಲಿದ್ದ ಸಿಪಾಯರ ಕಾವಲಿನಿಂದ ದೊಡ್ಡವರ ಮನೆ ಎಂದು ಅನ್ನಬಹುದಾಗಿತ್ತು

ಇದು ವರೆಗೆ ಇದೇ ಮನೆಯ ಮೇಲಿಂದ ಎಷ್ಟೋ ಸಾರೆ ಹಾಯ್ದಿದ್ದರೂ ಯಾರೂ ನಿನ್ನ ಅಂದಿರಲಿಲ್ಲ. ಈ ಹೊತ್ತು ಅಲ್ಲಿ ಒಬ್ಬ ಹೊಸ ಕಾವಲಗಾರನಿದ್ದ. ದಕ್ಷಿಣ ಆಫ್ರಿಕೆಯಲ್ಲಿ ಹಿಂದೂ ಜನರಿಗೆ ಕೂಲಿಯುವರು ಎಂದು ಒಟ್ಟು ಹೆಸರು; ಹಿಂದಕ್ಕೆ ಕೂಲಿ ಕೆಲಸದ ದೆಸೆಯಿಂದ ಹಿಂದುಸ್ಥಾನದಿಂದ ಅನೇಕ ಕೂಲಿಯುವರನ್ನು ಆಫ್ರಿಕಕ್ಕೆ ಒಯ್ಯುತ್ತಿದ್ದರು, ಇಂಥ ಕೂಲಿಯುವರೇ ಅಲ್ಲಿ ಬಹಳ ಇದ್ದುದರಿಂದ, ಕಲಿತವರಿಗೂ ಕಲಿಯದವರಿಗೂ ಅಲ್ಲಿಯ ಯುರೋಪಿಯರು ಕೂಲಿಯುವರ ಎಂದೇ ಕರೆಯುತ್ತಿದ್ದರು.

ಗಾಂಧಿಯುವರು ಬ್ಯಾರಿಸ್ಟರ ಇದ್ದರೂ ಕೂಲಿಯವರಂತೆ ಅವರ ಬಣ್ಣ ಕಪ್ಪು, ' ನಮ್ಮ ಮಂತ್ರಿ

ಗಳ ಅರಮನೆಯು ಮುಂದಿನಿಂದ ಹೆದರಿಕೆ ಇಲ್ಲದೆ ನಡೆಯುವ ಇವನು ಯಾವನು ?' ಹೀಗೆ ಮನಸಿನಲ್ಲಿ ಅಂದುಕೊಂಡು ಆ ಸಿಪಾಯಿಯು ಯಾವ ಮಾತನ್ನು ಆಡದೆ, ಅವರ ಹತ್ತರ ಹೋಗಿ, ಒಮ್ಮಿಂದೊಮ್ಮೆ ನುಗಿಸಿ, ತನ್ನ ಕಾಲಿನಿಂದ ಒದ್ದು ಬಿಟ್ಟನು.

ದಾರಿ ಹಿಡಿದು ಹೋಗುತ್ತಿದ್ದವರನ್ನು ಹೀಗೇಕೆ ಕಾರಣವಿಲ್ಲದೆ ಹೊಡೆದನು ಈತ ! ಎಂದು ಗಾಂಧಿಯವರಿಗೆ ಸೋಜಿಗವೆನಿಸಿತು. ಇನ್ನು, ಹೀಗೇಕೆ ಹೊಡೆದು ದಬ್ಬಿದಿ ಎಂದು ಅವನನ್ನು ಕೇಳಲಿಕ್ಕೆ ಹೋಗುವಷ್ಟರಲ್ಲಿ ಗಾಂಧಿಯವರ ಗುರುತಿನ ಒಬ್ಬ ಯುರೋಪಿನ ಗೆಳೆಯನು, "ಅವನು ನಿಮ್ಮನ್ನು ಕಾರಣವಿಲ್ಲದೆ ಹೊಡೆದದ್ದನ್ನು ನಾನು ನೋಡಿರುವೆ; ಅವನ ಮೇಲೆ ನೀವು ಖಟ್ಲೆ ಮಾಡುವದಿದ್ದರೆ, ನಾನು ನಿಮ್ಮಂತೆ ಸಾಕ್ಷಿ ಹೇಳುವೆ. ಎಂದನು"

ಅದಕ್ಕೆ ಗಾಂಧಿಯವರು "ಈತನ ಮೇಲೆ ಖಟ್ಲೆ ಮಾಡುವದೆ ? ಬೇಡಪ್ಪ. ಹಿಂದೂ ಜನರಾದ ನಮ್ಮವರೊಡನೆ ಯುರೋಪಿಯರು ನಡೆಯುವಂತೆ ಈತನೂ ನನ್ನ ಸಂಗಡ ನಡೆದ " ಅಂದರು.

ಆಗ ಸಾಹೇಬ ಮಿತ್ರನು " ಸುಮ್ಮನಿದ್ದಂತೆಲ್ಲ ಇವರು ಹೆಚ್ಚು ಮಾಡುವರು; ಆದ್ದರಿಂದ ಇವರಿಗೆ ಯಾರಾದರೂ ಬುದ್ಧಿ ಕಲಿಸಲಿಕ್ಕೆ ಬೇಕು " ಅಂದನು. ಇದಕ್ಕೆ ಗಾಂಧಿಯವರು " ಕೆಂಪು ಜನರೆಲ್ಲರೂ ಹಿಂದೀ ಜನರನ್ನು ಕೂಲಿಯವರು ಎಂದು ಹಳಿಯುತ್ತಿದ್ದಾಗ, ಪಾಪ ! ಈ ಬಡ ಸಿಪಾಯಿಯದೇ ಏನು ತಪ್ಪು ? " ಅಂದರು. ಆ ಗೆಳೆಯನು ಸಿಪಾಯಿಗೆ ಗಾಂಧಿಯವರ ಸ್ಥಿತಿಗತಿ ತಿಳಿಸಿದನು; ಸಿಪಾಯಿಯು ಗಾಂಧಿಯವರಿಗೆ ಕ್ಷಮೆ ಬೇಡಿಕೊಂಡನು.

---

## ೧೧ ಸತ್ಯಾಗ್ರಹ ಅಂದರೇನು ?

ಸತ್ಯಾಗ್ರಹ ಅಂದರೆ ಸತ್ಯದ ಹಟ. ಸತ್ಯಕ್ಕಾಗಿ ಎಲ್ಲವನ್ನು ಬಿಡಲಿಕ್ಕೆ ಸಿದ್ಧವಾಗುವದು, ಇದೊಂದು ತರದ ಹೆಚ್ಚಿನ ವ್ರತ. ಇದನ್ನೇ ಹಿಂದಕ್ಕೆ ಧ್ರುವ, ಪ್ರಲ್ಹಾದ ಮೊದಲಾದ ಬಾಲ-ಭಕ್ತರು ಆಚರಿಸಿ ನಮ್ಮವರು ತಮ್ಮವರು ಬೇರೆಯ

ವರು ಎಷ್ಟು ಕಾಡಿದರೂ ಸತ್ಯವನ್ನು ಬಿಡಬಾರದೆಂದು ನನಗೆ ಕಲಿಸಿದರು. ಸತ್ಯದ ದೆಸೆಯಿಂದ ಧ್ರುವನು ಘೋರ ತಪಶ್ಚರ್ಯ ಮಾಡಿದ; ಪ್ರಲ್ಹಾದನು ತಂದೆ ಯಿಂದ ಇರಿಸಿಕೊಂಡ, ಕೊರಿಸಿಕೊಂಡ, ಸುಡಿಸಿ ಕೊಂಡ, ಮುಳಗಿಸಿಕೊಂಡ; ಇಷ್ಟಾದರೂ ಸತ್ಯವನ್ನು ಬಿಡದೆ, ಸತ್ಯದ ಪುತ್ತಳಿಯಾದ ದೇವನನ್ನು ಬಲಮಾಡಿ ಕೊಂಡ.

ಗಾಂಧಿಯವರಿಗೆ ಇವರಿಬ್ಬರೇ ಮೂಲ ಗುರು ಗಳು. ಇವರಿಂದಲೇ ಗಾಂಧಿಯವರು ಸತ್ಯಾಗ್ರಹ ತತ್ವವನ್ನು ಕಲಿತು ಎಲ್ಲರಿಗೆ ಕಲಿಸಿದರು. ಸತ್ಯಾ ಗ್ರಹಿಯು ದೇವರನ್ನು ನಂಬಿ ಸತ್ಯದ ಸಲುವಾಗಿ ತಾನೇ ಕಷ್ಟಪಡಲು ಸಿದ್ಧನಾಗುವನು. ಇದರಲ್ಲಿ ಪರ ರಿಗೆ ಕೇಡಿಲ್ಲ; ಅಲ್ಲದೆ, ಕಷ್ಟಪಡುವ ಸತ್ಯಾಗ್ರಹಿಯ ಒಳಕಸುವು ಬೆಳೆಯುವದು. ದೇವರಲ್ಲಿಯ ನಂಬಿ ಗೆಯು ಗಟ್ಟಿಯಾಗುವದು. ಮನಸು ತಿಳಿ ನೀರಿನಂತೆ ಆಗುವದು. ಸತ್ಯಕ್ಕೆ ಸಾವಿಲ್ಲದ್ದರಿಂದ, ಸತ್ಯಾಗ್ರ ಹಿಯು ಸತ್ತರೂ ಅವನ ಹೆಸರು ಸಾಯದು; ಯಾಕಂ ದರೆ, ಸತ್ಯವೇ ಅವನ ಧರ್ಮ, ಅದೇ ಅವನ ಕರ್ಮ, ಅದೇ ಅವನ ತಾಯಿತಂದೆ, ಅದೇ ಆತನ ಮನೆಮಾರು.

ಅವನು ತನ್ನ ಚಿಂತೆ ಬಿಟ್ಟು ಜಗದ ಚಿಂತೆ ಮಾಡುವನು, ಗಾಂಧಿಯವರಿಗೆ ಹೆಂಡಿರು-ಮಕ್ಕಳಿದ್ದರೂ ಅವರು ನಿಜವಾದ ಸತ್ಯಾಗ್ರಹಿ ಆಗಲಿಕ್ಕೆ ತಮ್ಮ ದೇಹವನ್ನೇ ಮೀಸಲಿಟ್ಟರು. "ಸತ್ಯಾಗ್ರಹಕ್ಕೆ ಹೆಚ್ಚಿನ ಕಸವು ಬೇಡ; ಕಲಿತನ ಬೇಡ; ಕಂದ ಪ್ರಲ್ಹಾದನಲ್ಲಿ ಏನಿತ್ತು? ನಿಶ್ಚಯ ಒಂದೇ" ಎಂದು ಗಾಂಧಿಯವರು ಆಗಾಗ್ಗೆ ಅನ್ನುವರು.

---

## ೧೨ ಸತ್ಯಾಗ್ರಹಕ್ಕೆ ಗೆಲವು

ದಕ್ಷಿಣ ಆಫ್ರಿಕಕ್ಕೆ ನಮ್ಮ ದೇಶದಿಂದ ಅನೇಕ ಜನರು ಹೊಟ್ಟೆ ಹೊರಕೊಳ್ಳಲಿಕ್ಕೆ ಹೋಗಿರುವರು; ಇವರಲ್ಲಿ ಕೂಲಿಗಾಗಿ ಹೋದವರೇ ಬಹಳ; ಕೂಲಿಗಾಗಿ ಹೋದ ಕೆಲವರು ಕೈಯಲ್ಲಿ ನಾಲ್ಕು ದುಡ್ಡು ಕೂಡಿಟ್ಟುಕೊಂಡು ಅಲ್ಲಿ ತೋಟಪಟ್ಟಿಗಳನ್ನು ಮಾಡಹತ್ತಿದರು, ಹಿಂದು

ಸ್ಥಾನದಲ್ಲಿ ಬೆಳೆಯುವ ಹಲವು ಬಗೆಯ ಪಲ್ಲೆ ಕಾಯಿಗಳನ್ನು ಅಲ್ಲಿ ಬೆಳೆಸಿ ವ್ಯಾಪಾರ ನಡಿಸಿದರು, ದಕ್ಷಿಣ ಆಫ್ರಿಕೆಯಲ್ಲಿ ಎಲ್ಲಕ್ಕೂ ಮೊದಲು ಮಾವಿನ ಬೆಳೆಯನ್ನು ಪ್ರಾರಂಭಿಸಿದವರು ನಮ್ಮವರೇ. ಇದರಿಂದ ಕೂಲಿಯವರು ಹೊಲ-ಮನೆ ಗಳಿಸಿಕೊಂಡು ಸುಖದಿಂದ ಬಾಳಹತ್ತಿದರು. ಇವರ ಜಾಣತನ, ವ್ಯಾಪಾರದ ಏಳಿಗೆ ಮುಂತಾದ್ದನ್ನು ಕಂಡು ಅಲ್ಲಿಯ ಕೆಂಪು ಜನರಿಗೆ ( ಯುರೋಪಿಯರಿಗೆ ) ಹೊಟ್ಟೆಕಿಚ್ಚು ಉಂಟಾಯಿತು. ಆದುದರಿಂದ, ಹಿಂದೀ ಕೂಲಿಕಾರರನ್ನು ಏನಾದರೂ ಹಂಚಿಕೆಯಿಂದ ಹೊರಗೆತಳ್ಳಬೇಕೆಂದು ಹೊಂಚು ಹಾಕಿದರು; ಅದು ಕೈಮೀರಿದ ಕೆಲಸವಾದ್ದರಿಂದ ಪ್ರತಿ ಹಿಂದುವು ೪೫ ರೂಪಾಯಿ ತಲೆಪಟ್ಟಿ ಕೊಡಬೇಕೆಂದು ಗೊತ್ತಾಯಿತು; ಇದು ಬಹು ಅನ್ಯಾಯದ ನಿಯಮವಿದ್ದು, ಇಂಥ ಕಟ್ಟಳೆಯು ಯಾವ ದೇಶದಲ್ಲಿಯೂ ಇರಲಿಲ್ಲ. ಹಿಂದೀ ಜನರ ತಲೆಯ ಮೇಲೆ ಹೇರಿದ ಈ ಅನ್ಯಾಯವನ್ನು ನೋಡಿ ಗಾಂಧಿಯವರಿಗೆ ಬಹು ದುಃಖವಾಯಿತು. ಗಾಂಧಿಯವರು ಈ ಅನ್ಯಾಯದ ಕಾಯಿದೆಯನ್ನು ತೆಗೆದುಹಾಕಲಿಕ್ಕೆ ಪ್ರಯತ್ನ ಪಟ್ಟರು. ಅಲ್ಲಿಯ ಹಿಂದೀ

ಎಂದರು. ಇದನ್ನು ಕೇಳಿದ ಕೂಡಲೇ ಮಹಾತ್ಮರು ಕಳವಳಗೊಂಡು ' ಅವನನ್ನು ಹೇಗಾದರೂ ಮಾಡಿ ಬಿಡಿಸಲಿಕ್ಕೇಬೇಕು' ಎಂದು ಮುಖ್ಯ ಪೋಲೀಸ ಅಧಿಕಾರಿಗೆ ಕಾಗದ ಬರೆದು ಅವನನ್ನು ಬಿಡಲಿಕ್ಕೆ ಬಿನ್ನವಿಸಿಕೊಂಡರು; ಅಷ್ಟಕ್ಕೆ ಅವನನ್ನು ಬಿಟ್ಟರು.

ಗಾಂಧಿಯವರು ದಕ್ಷಿಣ ಆಫ್ರಿಕದ ಸರಕಾರದವರೊಡನೆ ಎಷ್ಟು ಪ್ರಾಮಾಣಿಕತನದಿಂದ ನಡೆದರೂ ಕೊನೆಗೆ ಸರಕಾರದವರು ಒಪ್ಪಂದ ಮುರಿದು ನಡೆದರು. ಇದನ್ನು ಕಂಡು ಗಾಂಧಿಯವರು ಮತ್ತೆ ಸತ್ಯಾಗ್ರಹ ನಡಿಸುವತಮ್ಮ ವಿಚಾರವನ್ನು ಎಲ್ಲರಿಗೆ ತಿಳಿಸಿ, ಸಂತೋಷದಿಂದ ಸರಕಾರದ ಅಪ್ಪಣೆಯ ಚೀಟಿಗಳನ್ನು ಪಡೆದವರೆಲ್ಲರೂ ಅವುಗಳನ್ನು ಒತ್ತಟ್ಟಿಗೆ ಕೂಡಿಸಿ ಹೋಳಿ ಮಾಡಬೇಕೆಂದರು. ಇಂಥ ದಿನ ಅವುಗಳನ್ನು ಹೋಳಿ ಮಾಡುವದು ಗೊತ್ತಾಯಿತು; ಅದರಂತೆ, ಸ್ವಸಂತೋಷದಿಂದ ಅನೇಕರು ತಮ್ಮ ಚೀಟಿಗಳನ್ನು ತಂದು ಕೊಟ್ಟರು. ಹೀಗೆ ಸಂತೋಷದಿಂದ ತಮ್ಮ ತಮ್ಮ ಚೀಟಿಗಳನ್ನು ತಂದು ಕೊಟ್ಟವರಲ್ಲಿ ಮೀರ ಅಲಮನೂ ಒಬ್ಬನಿದ್ದ. ಆತನಿಗೀಗ ಮಹಾತ್ಮರ ಮನಸು ತಿಳಿದುದರಿಂದ 'ಗಾಂಧಿಯವರೇ ! ಇಗೊಳ್ಳಿ, ನನ್ನ ಚೀಟಿ

ಯುನ್ನೂ ಸುಡಲಿಕ್ಕೆ. ನೀವು ಇಂಥ ಬಹದ್ದೂರರು ಎಂಬುದು ನನಗೆ ತಿಳಿದಿರಲಿಲ್ಲ. ' ಎಂದು ಶರಣು ಬಂದನು; ಗಾಂಧಿಯವರು ಅವನನ್ನು ಹಿಡಿದೆತ್ತಿ ಮುದ್ದಾಡಿದರು.

---

## ೧೪. ಬೇನಿಗರ ಆರೈಕೆ

ಬೇನೆಯಿಂದ ನರಳುತ್ತಿರುವವರ ಆರೈಕೆ ಎಂದರೆ ಮಹಾತ್ಮರಿಗೆ ಬಹು ಸಂತೋಷ. ನಾವು ಜಡ್ಡಿನಿಂದ ನರಳುತ್ತಿರುವಾಗ ನಮಗೆ ಯಾರಾದರೂ ಆರೈಕೆ ಮಾಡಿದರೆ ಆನಂದವಾಗಿ ಅವರನ್ನು ಹರಸುವೆವು; ಅದರಂತೆಯೇ ಎಲ್ಲ ಜಡ್ಡಿನವರು; ಈ ಗುಟ್ಟನ್ನು ಅರಿತು ಮಹಾತ್ಮರು ಬೇನಿಗರ ಸೇವೆ ಮಾಡಬೇಕೆಂದು ಆಗಾಗ್ಗೆ ಮನಸ್ಸಿನಲ್ಲಿಯೇ ಮಂಡಿಗೆ ಮಾಡುತ್ತಿದ್ದರು; ಆದರೂ ಕೈಯಿಂದಾಗಿರಲಿಲ್ಲ.

ಒಮ್ಮೆ, ಒಬ್ಬ ಕುಷ್ಟರೋಗಿಯು ಗಾಂಧಿಯವರ ಮನೆಬಾಗಿಲಿಗೆ ಬಂದ. ಕುಷ್ಟರೋಗವೆಂಬುದು ಬಹು ಕೆಟ್ಟದು; ಇಂಥ ರೋಗಿಯನ್ನು ಕಣ್ಣಿನಿಂದ ನೋಡಿದರೂ ಹೇಸಿಕೆ ಬರುವದು; ಅಂದ ಮೇಲೆ ಮುಟ್ಟುವ ಮಾತು ದೂರೇ ಉಳಿಯಿತು. ಈತನನ್ನು ನೋಡಿದೊಡನೆಯೆ ಮಹಾತ್ಮರ ಎದೆಯಲ್ಲಿ ಅಡಗಿದ್ದ ಕರುಣೆಯು ಕಣ್ತೆರಿಯಿತು; ಜೀವವು ಕಸವಿಸಿಗೊಂಡಿತು; ತಾಯಿಯು ಬೇನೆಬಿದ್ದ ಮಗನಿಗೆ ಹೇಸಿಕೊಳ್ಳದ ಆರೈಕೆ ಮಾಡುವಂತೆ ಆ ಕುಷ್ಟ ರೋಗಿಯನ್ನು ತಮ್ಮ ಮನೆಯಲ್ಲಿಟ್ಟುಕೊಂಡರು. ಅವನಿಗಾಗಿ ಬೇರೆ ಒಂದು ಕೋಣೆಯನ್ನು ಕೊಟ್ಟರು. ದಿನಾಲು ಕೈಯಿಂದ ಅವನ ಗಾಯ ತೊಳೆದು ಔಷಧ ಹಚ್ಚುವ ಕೆಲಸ ನಡಿಸಿದರು; ಮುಂದೆ ಆತನ ಬೇನೆ ಬೆಳೆಯಲು ಆಸ್ಪತ್ರಿಗೆ ಕಳಿಸಿದರು.

ಬರಬರುತ್ತ ಬೇನಿಗರ ಸೇವೆ ಮಾಡಬೇಕೆಂಬ ಹಂಬಲವು ಹೆಚ್ಚು ಬಲಿಯಿತು; ಆಗ ಗಾಂಧಿಯವರು ಒಂದು ಆಸ್ಪತ್ರಿಗೆ ಹೋಗಿ ಅಲ್ಲಿ ದಿನಾಲು ಎರಡು ತಾಸು ಪುಕ್ಕಟೆಯಾಗಿ ರೋಗಿಗಳಿಗೆ ಔಷಧ ಹಂಚುವ ಕೆಲಸ ಕೈಕೊಂಡರು. ದಕ್ಷಿಣ ಆಫ್ರಿಕೆಯಲ್ಲಿ ಪ್ಲೇಗಿನ

ಪಿಡಗು ಆದಾಗ, ಮಹಾತ್ಮರು ತಮ್ಮ ಮಿತ್ರರ ಸಹಾಯದಿಂದ ಬೇರೆ ಒಂದು ದವಾಖಾನೆಯನ್ನೇ ಹೊರಡಿಸಿದರು. ಆಗ ಬಿದ್ದ ಕೆಲಸಗಳನ್ನೆಲ್ಲ ತಾವೇ ಮಾಡುತ್ತಿದ್ದರು. ಇದು ಹೊಲಸು, ಅದು ಕೊಳಕು ಎಂದು ಅನ್ನುತ್ತಿರಲಿಲ್ಲ. ಈ ಬಗೆಯ ಸೇವೆಯಿಂದ ಮಹಾತ್ಮರ ಹೃದಯವು ನಿರ್ಮಲವಾಯಿತು; ಅವರಲ್ಲಿ ಭೂತದಯೆಯು ಬೆಳೆಯಿತು; ಎಲ್ಲರ ಜೀವವು ಒಂದೇ ಎಂಬುದನ್ನು ಮನಗಂಡರು; ಅಲ್ಲದೆ, ಬಡವರು ಬೇನೆಯವರು, ರೋಗಿಗಳು, ತಮ್ಮ ಅಣ್ಣತಮ್ಮಂದಿರು ಎಂಬುದನ್ನು ಆರೈಕೆಯಿಂದ ಗಟ್ಟಿಮಾಡಿಕೊಂಡರು. ಇದರಿಂದ ಮಹಾತ್ಮರಿಗೆ ಎಲ್ಲರೂ ತಮ್ಮವರು ಎಂಬ ಭಾವನೆಯು ಹೆಚ್ಚಾಯಿತು.

# ೧೫. ಗಾಂಧಿಯವರ ತ್ಯಾಗ

ದಕ್ಷಿಣ ಆಫ್ರಿಕೆಗೆ ಹೋದಂದಿನಿಂದ ಒಂದಿಲ್ಲೊಂದು ಬಗೆಯಿಂದ ಅವರು ಹಿಂದೀ ಜನರನ್ನು ಎಚ್ಚರಿಸುವ ಕಾರ್ಯ ನಡಿಸಿದ್ದರು; ಅಂದರೆ, ಅಲ್ಲಿದ್ದ ಹಿಂದೀ ಜನರಿಗೆ ಅವರೊಬ್ಬ ದಾರಿ ತೋರಿಸುವವರೇ ಆಗಿದ್ದರು; ಮುಖ್ಯವಾಗಿ, ಸತ್ಯಾಗ್ರಹ ಯುದ್ಧ ನಡಿಸಿ ಹಿಂದೀ ಜನರು ಬೇಡುವ ಹಕ್ಕುಗಳು ನ್ಯಾಯವೆಂದು ತೋರಿಸಿದ್ದರು. ಅದಕ್ಕಾಗಿ ಹಲವು ಜನರೊಡನೆ ಸೆರೆಮನೆ ಕಂಡು ಕಷ್ಟಪಟ್ಟಿದ್ದರು. ಆದ್ದರಿಂದ ಎಲ್ಲರ ಬಾಯಲ್ಲಿ ಅವರ ಹೆಸರು ಆಡುತ್ತಿತ್ತು.

ಇಂಥವರು ದಕ್ಷಿಣ ಆಫ್ರಿಕೆಯನ್ನು ಬಿಟ್ಟು ಹಿಂದುಸ್ಥಾನಕ್ಕೆ ಹೋಗುವ ಸುದ್ದಿಯನ್ನು ಕೇಳಿ ಹಲವು ಊರಿನವರು ಗಾಂಧಿಯವರನ್ನು ತಮ್ಮಲ್ಲಿಗೆ ಬರಮಾಡಿಕೊಂಡು ಅವರ ಮೇಲೆ ತಮ್ಮ ಪ್ರೀತಿಯ ಕಾಣಿಕೆಗಳ ಮಳೆಗರೆದರು; ಹೀಗೆ

ಕೊಟ್ಟ ಒಡವೆಗಳಲ್ಲಿ ಬೆಳ್ಳಿ, ಭಂಗಾರ, ಮುತ್ತು, ಮತ್ತು ವಜ್ರದ ವಸ್ತುಗಳೂ ಇದ್ದವು. ಗಾಂಧಿಯವರ ಪತ್ನಿ ಕಸ್ತೂರಿಬಾಯರ ದೆಸೆಯಿಂದ ಕೊಟ್ಟ ಒಂದೇ ಒಡವೆಯು ೮೦೦ ರೂಪಾಯಿ ಬೆಲೆಯುದಿತ್ತು.

ಅನೇಕ ವರ್ಷಗಳಿಂದ ಅಲ್ಲಿ ಗಾಂಧಿಯವರು ಮಾಡಿದ ಸೇವೆಯನ್ನು ನೆನಿಸಿಕೊಂಡು ಜನರು ಅವರಿಗೆ ಈ ಬಗೆಯ ಮರ್ಯಾದೆ ಮಾಡಿದ್ದರು. ಗಾಂಧಿಯವರಿಗಾದರೂ ಇದರ ಗುಟ್ಟು ತಿಳಿಯದೆ ಇದ್ದೀತೇ? ಜನರು ತಮಗೆ ಪ್ರೀತಿಯಿಂದ ಈ ವಸ್ತುಗಳನ್ನು ಕಾಣಿಕೆಯಾಗಿ ಕೊಟ್ಟಿದ್ದಾರೆ; ಆದರೆ, ಅವುಗಳನ್ನು ತೆಗೆದುಕೊಳ್ಳುವದೆಂದರೆ, ಮಾಡಿದ ಸೇವೆಗೆ ಕೂಲಿಯನ್ನು ಅಪೇಕ್ಷಿಸಿದಂತೆ ಆಗುವದಲ್ಲ? ಆದುದರಿಂದ ಅವುಗಳನ್ನು ಅಲ್ಲಿಯೇ ಒಂದು ಬ್ಯಾಂಕಿನಲ್ಲಿಟ್ಟು ಅದನ್ನು ಜನರ ಹಿತಕ್ಕಾಗಿ ಬಳಿಸಬೇಕೆಂದು ನಿಶ್ಚಯಿಸಿದರು; ಮೊಟ್ಟ ಮೊದಲು ಈ ವಿಚಾರವು ಕಸ್ತೂರಿಬಾಯರಿಗೆ ಸರಿತೋರಲಿಲ್ಲ; ಕೊನೆಗೆ, ಅವರಿಗೂ ತಿಳಿಹೇಳಿ ಆ ದುಡ್ಡಿನೊಳಗಿಂದ ಒಂದು

ಕಾಸನ್ನು ಕೂಡ ಮುಟ್ಟದೆ, ಅದನ್ನೆಲ್ಲ ಜನರಿಗಾಗಿಯೇ ಇಟ್ಟು ಹಿಂದುಸ್ಥಾನಕ್ಕೆ ಹೊರಟು ಬಂದರು.

ಪರರ ಹಣವನ್ನು ಸತ್ಯಾಗ್ರಹಿಯು ಮುಟ್ಟಲಾರನು. ಮಹಾತ್ಮರಂತೂ ಸತ್ಯಾಗ್ರಹದ ಮುಂದಾಳುಗಳು; ಅಂದ ಮೇಲೆ ಅವರು ಅದನ್ನು ಮೀರಿ ನಡೆಯುವದೆಂತು?


---

## ೧೬ ಸಾದಾ ಇರುವಿಕೆ

ದಕ್ಷಿಣ ಆಫ್ರಿಕದಲ್ಲಿದ್ದು ಈ ವರೆಗೆ ಸತ್ಯಾಗ್ರಹ ತಪಶ್ಚರ್ಯವನ್ನು ನಡಿಸಿದ್ದರು. ಇನ್ನು ತಮ್ಮ ತಾಯಿನಾಡಾದ ಹಿಂದುಸ್ಥಾನಕ್ಕೆ ಬಂದು ಇಲ್ಲಿಯ ಜನರ ಸೇವೆ ಮಾಡಬೇಕೆಂದು ಗಾಂಧಿಯವರು ಆಸೆಪಟ್ಟರು. ಈ ಮೊದಲು ಗಾಂಧಿಯವರು ಕೆಲ ದಿನ ಉಪವಾಸ, ಕೆಲ ದಿನ ಹಣ್ಣು ಹಂಪಲಗಳನ್ನು ತಿಂದು ಇರಹತ್ತಿದರು; ಈ ಬಗೆಯ ಪ್ರಯತ್ನಗಳಿಂದ ಅವರು

ಮೊದಲು ತಮ್ಮ ನಾಲಿಗೆಯನ್ನು ಗೆದ್ದರು; ನಾಲಿಗೆಯ ರುಚಿಯ ದೆಸೆಯಿಂದ ಮನುಷ್ಯನು ಕಂಡ ಕಂಡ ಅನ್ನ-ಆಹಾರ, ತಿಂಡಿ-ತಿನಸುಗಳನ್ನು ತಿನ್ನ ಹತ್ತಿದರೆ, ಮೊದಲು ಆ ಮನುಷ್ಯನ ಹೊಟ್ಟೆ ಕೆಡುವದು; ಅದರಿಂದ, ಮನಸು ಕೆಡುವದು; ಮನಸು ಕೆಟ್ಟ ಮೇಲೆ ಮನುಷ್ಯನಿಂದ ಒಳ್ಳೆಯ ಕೆಲಸಗಳು ಆಗಲಾರವು. ತಮ್ಮಿಂದ ದೇಶಸೇವೆ ಜನ-ಸೇವೆಯಾಗಬೇಕೆಂದು ಹಂಬಲಿಸುವ ಗಾಂಧಿಯವರು ಈ ರೀತಿಯಾಗಿ ಮೊದಲು ತಮ್ಮ ಮನಸ್ಸನ್ನು ತಮ್ಮ ಕೈಯಲ್ಲಿಟ್ಟುಕೊಳ್ಳಲಿಕ್ಕೆ ಯತ್ನಿಸಿದರು. ಈಗ ಅವರ ಮನಸು ತಿಳಿ ನೀರಿನಂತಾದ್ದರಿಂದ, ತಮ್ಮ ತಪ್ಪುಗಳು ಅವರಿಗೆ ತಿಳಿಯಹತ್ತಿದವು. ಮಂದಿಯ ತಪ್ಪು ಎಣಿಸದೆ ತಮ್ಮ ತಪ್ಪನ್ನೇ ಎಣಿಸುವದನ್ನು ನಡಿಸಿದರು. ಹುಲ್ಲಿಗಿಂತ ಸಣ್ಣಾಗಿ ನಡೆಯುವದರಲ್ಲಿರುವ ಮನುಷ್ಯನ ಡೊಡ್ಡಸ್ತಿಕೆಯು ಒಣ ಜಂಭದಲ್ಲಿ ಇಲ್ಲವೆಂದು ಅವರು ಮನಗಂಡರು. ಅಂದಿನಿಂದ ಅವರು ತಮ್ಮ ಊಟ, ಉಡಿಗೆ, ಇರುವಿಕೆ, ತಮ್ಮ ವಿಚಾರ ಮುಂತಾದವುಗಳ ದಿಕ್ಕನ್ನು ಬದಲಿಸಿದರು. ಮತ್ತು ಅವರು ಊಟದಂತೆ ಉಡಿಗೆ





ಯಲ್ಲಿಯೂ ಸಾದಾ ಉಡಪನ್ನೇ ಬಳಸಹತ್ತಿದರು. ಮುಂದೆ ಅನೇಕ ವರ್ಷ ಅವರು ಗುಜ್ಜರಂತೆ ದೊಡ್ಡ ರುಮಾಲು, ಕಸಿಯಂಗಿ, ಧೋತರ ಮುಂತಾದವುಗಳನ್ನೇ ಉಡುತ್ತಿದ್ದರು. ಆಫ್ರಿಕದಿಂದ ಹಿಂದುಸ್ಥಾನಕ್ಕೆ ಇದೇ ತರದ ಉಡಿಗೆಯಿಂದಲೇ ಬಂದದ್ದು

---

## ೧೭. ಸತ್ಯಾಗ್ರಹಾಶ್ರಮ

ಹಿಂದುಸ್ಥಾನಕ್ಕೆ ಬಂದ ಮೇಲೆ ಗಾಂಧಿಯವರು ಕೆಲದಿನ ದೇಶದ ಸ್ಥಿತಿ ನೋಡಲಿಕ್ಕೆ ಅಲ್ಲಲ್ಲಿ ಅಡ್ಡಾಡಿದರು. ದೇಶಸೇವೆ ಮಾಡಬೇಕು, ಅನ್ಯಾಯದಿಂದ ಕಷ್ಟಪಡುತ್ತಿರುವವರನ್ನು ಉಳಿಸಬೇಕು. ಆದಷ್ಟು ಧರ್ಮರಾಜ್ಯ-ರಾಮರಾಜ್ಯ ಸ್ಥಾಪಿಸಬೇಕೆಂಬುದೇ ಅವರ ಮನದ ಮಂಡಿಗೆ; ಮತ್ತು ಅದಕ್ಕಾಗಿ ಮನೆಮಾರು, ಹೆಂಡಿರು ಮಕ್ಕಳು, ಕೊನೆಗೆ ತಮ್ಮ ದೇಹವು ಬಲಿಯಾದರೂ ಅಡ್ಡಿಯಿಲ್ಲವೆಂದು ಮನಸು ಗಟ್ಟಿ ಮಾಡಿದರು.

ದೇಶಕಾರ್ಯಕ್ಕೆ ತಮಗೂ ತಮ್ಮಂಥವರಿಗೂ ಅನುಕೂಲವಾಗಬೇಕೆಂದು ಅಹಮ್ಮದಾಬಾದದಲ್ಲಿ ಸತ್ಯಾಗ್ರಹಾಶ್ರಮ ಅಂದರೆ ಸತ್ಯಾಗ್ರಹಿಗಳ ಮನೆ ಎಂಬುದೊಂದು ಆಶ್ರಮ ಸ್ಥಾಪಿಸಿದರು. ಇದನ್ನು ಅಹಮ್ಮದಾಬಾದದ ಸ್ಮಶಾನ ಹಾಗೂ ಸೆರೆಮನೆಯು ನಡುವೆ ಕಟ್ಟಿರುವರು. ಸತ್ಯಾಗ್ರಹಿಗೆ ಸಾವು ಮತ್ತು ಸೆರೆಮನೆಯು ಅಂಜಿಕೆ ಇವೆರಡನ್ನೂ ತಪ್ಪಿಸಬೇಕೆಂಬುದೇ ಅವರ ವಿಚಾರ. ಇವೆರಡಕ್ಕೂ ಅಂಜದೆ, ಅಳುಕದೆ, ಸತ್ಯಾಗ್ರಹಿಯು ನಿರ್ಭಯನಾಗಲಿಕ್ಕೆ ಬೇಕೆಂದು ಅವರು ಆಗಾಗ್ಗೆ ಹೇಳುವರು.

ಈ ಸತ್ಯಾಗ್ರಹಾಶ್ರಮದಲ್ಲಿ ಗಾಂಧಿಯವರು ಅವರ ಹೆಂಡತಿ ಮಕ್ಕಳು, ಇನ್ನೂ ಹಲವರು ಇರುತ್ತಾರೆ. ಇಂಥ ಜಾತಿಯವರು ಬರಬೇಕು, ಇಂಥವರು ಬರಬಾರದು ಎಂಬ ನಿಯಮವಿಲ್ಲ. ಅಲ್ಲಿಯ ನಿಯಮದಂತೆ, ಊಟ, ಉಡಿಗೆ ಕೆಲಸ-ಬೊಗಸೆ ಮಾಡಿಕೊಂಡಿರುವವರು ಅಲ್ಲಿರಬಹುದು; ಆದ್ದರಿಂದ, ಅಲ್ಲಿ ಎಲ್ಲ ಜಾತಿಯವರು ಹೆಂಗಸರು ಗಂಡಸರು ಹೊಲೆಯರು ಯುರೋಪಿಯರೂ ಇದ್ದಾರೆ. ತಮ್ಮ ಮನ

ಸ್ಸನ್ನು ಕೈಯಲ್ಲಿಟ್ಟುಕೊಂಡು, ದೇಶಸೇವೆಯೇ ದೇವರ ಸೇವೆ ಎಂದು ತಿಳಕೊಂಡು, ಕೆಲಸಮಾಡುತ್ತಿರುವದೇ ಇಲ್ಲಿಯ ಜನರ ಮುಖ್ಯ ಕೆಲಸ.

ಇಲ್ಲಿ ಎಲ್ಲರೂ ಒಂದೇ ಅಡಿಗೆಮನೆಯಲ್ಲಿ ಉಣ್ಣುವರು. ಕೂಡಿ ಕೆಲಸ ಮಾಡುವರು; ಕೂಡಿ ನೀರು ತುಂಬುವರು; ಪಾತ್ರೆಗಳನ್ನು ತಿಕ್ಕುವರು; ಅಲ್ಲಿದ್ದ ದನ-ಕರುಗಳ ದಡ್ಡಿಯನ್ನು ಹಸನು ಮಾಡುವರು; ನೂಲುವರು; ಒಕ್ಕಲತನ ಮಾಡುವರು; ಅಷ್ಟೇ ಅಲ್ಲದೆ, ಮಲ-ಮೂತ್ರ ಸ್ಥಳಗಳನ್ನು ಕೂಡ ತಾವೇ ಸ್ವಚ್ಛ ಮಾಡುವರು. ಇದರಿಂದ ನಾನು ಮೇಲು, ಅವನು ಕೀಳು ಎಂಬುವ ಭಾವನೆಯೇ ಹೋಗುವದು. ಮೇಲಾಗಿ, ಎಲ್ಲರಿಗೆ ಮೈ-ತುಂಬ ದುಡಿತವಾಗುವದು.

---

ಸತ್ಯಾಗ್ರಹಾಶ್ರಮದಲ್ಲಿ ಇರುವವರು ದಿನಾಲು ಬೆಳಿಗ್ಗೆ ನಾಲ್ಕು ಘಂಟೆಗೆ

ಮುಖ ತೊಳೆದುಕೊಂಡು ಪ್ರಾರ್ಥನೆಗಾಗಿ ನೆರೆ ಯುವರು. ಮಧ್ಯದಲ್ಲಿ ಮಹಾತ್ಮರು ಬಹು ವಿನ ಯದಿಂದಲೂ ಭಕ್ತಿಯಿಂದಲೂ ಕುಳಿತುಕೊಳ್ಳು ವರು. ಆಶ್ರಮದ ಪಂಡಿತಜಿಯುವರು ದೇವರ ಹಾಡು ಹೇಳುವರು; ರಘುಪತಿರಾಘವ ರಾಜಾ ರಾಮ ಪತೀತಪಾವನ ಸೀತಾರಾಮ ಎಂದು ಭಜನೆ ಮಾಡುವರು. ತರುವಾಯ ಭಗವದ್ಗೀತೆ ಯಲ್ಲಿಯ ಕೆಲವು ಶ್ಲೋಕಗಳನ್ನು ಅನ್ನುವರು. ಆ ಮೇಲೆ ಕೆಲವು ಉಪದೇಶದ ಮಾತುಗಳನ್ನು ಹೇಳುವರು. ಆ ಮೇಲೆ, ಮಹಾತ್ಮರು ಅಡ್ಡಾಡ ಲಿಕ್ಕೆ ಹೋಗುವರು; ಬಂದನಂತರ ಅಡಿಗೆಯ ಮನೆಯಲ್ಲಿ ಹೋಗಿ ತಮ್ಮ ಪಾಲಿನ ಪಲ್ಲೆ ಆರಿಸುವ ಅಥವಾ ಮತ್ತೇನಾದರೂ ಕೆಲಸವನ್ನು ಮಾಡು ವರು; ಆ ಮೇಲೆ ಸ್ನಾನ, ಬೆಳಗಿನ ಫಲಹಾರ ತೀರಿಸಿಕೊಂಡು ಪತ್ರ ಲೇಖಗಳನ್ನು ಬರೆಯಲಿಕ್ಕೆ ಕೂಡ್ರುವರು; ಅಥವಾ ಯಾರಾದರೂ ಭೆಟ್ಟಿಯಾಗ ಲಿಕ್ಕೆ ಬಂದಿದ್ದರೆ, ಅವರೊಡನೆ ಮಾತನಾಡು ವರು. ಮಧ್ಯಾನ್ಹದ ಊಟದ ಕಾಲಕ್ಕೆ ಮಹಾ ತ್ಮರೂ ಒಮ್ಮೊಮ್ಮೆ ಬಡಿಸುವರು. ನಂತರ, ರಾಟಿ

ಯನ್ನಿಟ್ಟುಕೊಂಡು ತಮ್ಮ ನಿತ್ಯದ ನೂಲುವಿಕೆ ಯನ್ನು ನಡಿಸುವರು; ಹಂಜಿ ಇಲ್ಲದಿದ್ದರೆ ಹತ್ತಿ ಯನ್ನು ಹಿಂಜಿ, ಹಂಜಿಮಾಡಿಟ್ಟುಕೊಳ್ಳುವರು; ಸಂಜೆಯಾಗುವ ಮೊದಲು ಊಟ ತೀರಿಸಿಕೊಂಡು ಆಶ್ರಮದಲ್ಲಿಯ ಚಿಕ್ಕ ಚಿಕ್ಕ ಹುಡುಗರನ್ನು ಕಟ್ಟಿ ಕೊಂಡು ಅಡ್ಡಾಡಲಿಕ್ಕೆ ಹೋಗುವರು. ಅವರೊ ಡನೆ ನಗುತ್ತ ಕೆಲಿಯುತ್ತ ಇದ್ದು, ಮತ್ತೆ ಸಂಜೆಯ ಪ್ರಾರ್ಥನೆಯ ಗಂಟೆಯ ಹೊತ್ತಿಗೆ ಆಶ್ರಮಕ್ಕೆ ಬರುವರು; ರಾತ್ರಿ ೯ ಗಂಟೆಗೆ ತಪ್ಪದೆ ಮಲಗು ವರು. ಸತ್ಯಾಗ್ರಹಿಯಲ್ಲಿ ಒಂದು ಕ್ಷಣಕೂಡ ವ್ಯೆಗ ಳ್ಳತನ ಸೇರಬಾರದೆಂದು ಗಾಂಧಿಯವರು ಇಂತಿಂಥ ವೇಳೆಗೆ ಇಂತಿಂಥ ಕೆಲಸ ಎಂದು ಗೊತ್ತು ಮಾಡಿಕೊಂಡು ಗಡಿಯಾರದಂತೆ ನಡೆಯುವರು. ಇದರಿಂದ ಆಲಸ್ಯ ಎಂಬುದು ಅವರಿಗೆ ಅರಿಯದ ಮಾತಾಗಿದೆ.

## ೧೯ ದರಿದ್ರ ನಾರಾಯಣನನ್ನು ಕಂಡದ್ದು

ದಕ್ಷಿಣ ಆಫ್ರಿಕೆಯಲ್ಲಿರುವಾಗಲೇ ಗಾಂಧಿಯವರಿಗೆ ಒಮ್ಮೊಮ್ಮೆ ಹಿಂದುಸ್ಥಾನದ ಸ್ಥಿತಿಯ ನೆನಪಾಯಿತೆಂದರೆ ಇಡೀ ರಾತ್ರಿ ನಿದ್ದೆ ಹತ್ತುತ್ತಿರಲಿಲ್ಲ. ಹಿಂದುಸ್ಥಾನದ ಬಡತನ, ಹಿಂದೂ ಜನರು ತಮ್ಮ ಅಣ್ಣ ತಮ್ಮಂದಿರಾದ ಹೊಲೆಯರನ್ನು ಮುಟ್ಟದಿರುವದು, ಇವುಗಳನ್ನೆಲ್ಲ ನೋಡಿ ಆಗಾಗ್ಗೆ ಅವರು ಮಿಡುಕುತ್ತಿದ್ದರು. ಹಿಂದುಸ್ಥಾನಕ್ಕೆ ಬಂದ ಮೇಲಂತೂ ಇಲ್ಲಿಯ ಬಡತನದ ಭವಣೆಯನ್ನು ಕಂಡು ಅವರ ಎದೆ ಎರಡು ಹೋಳಾಯಿತು; ಇಂಥವರಿಗೆ ಸುಲಭವಾಗಿ ಅನ್ನ ಸಿಗುವ ದಾರಿ ಯಾವುದು ಎಂಬುದನ್ನು ಬಹು ದಿನ ವಿಚಾರ ಮಾಡಿ ಕೊನೆಗೆ ರಾಟೆಯೋ ಎಂದು ಕಂಡು ಹಿಡಿದರು; ಆದರೆ ಗಾಂಧಿಯವರು ಯಾವಾಗಲೂ

ತಾವು ಮಾಡಿ ಮುಂದಿಗೆ ಹೇಳುವವರು; ಆದ್ದರಿಂದ ತಾವು ಸ್ವತಃ ರಾಟೆಯ ಮೇಲೆ ನೂಲಲಿಕ್ಕೆ ಕಲಿತು, ತಾವು ನೂತ ನೂಲಿನಿಂದಲೇ ಬಟ್ಟೆ ನೇಯಿಸಿ ಕೊಂಡು ಅರಿವೆ ಉಡುತೊಡಹತ್ತಿದರು; ನೂಲು ವಿಕೆಯಿಂದ ಆನಂದ, ದುಡಿತ, ಇವುಗಳು ಆಗುವದ ಲ್ಲದೆ ಹರಟೆಯ ಸಮಯದಲ್ಲಿಯೇ ತನಗೆ ಬೇಕಾ ಗುವ ಅರಿವೆಗಳು ತನ್ನಿಂದಲೇ ಸಿದ್ಧವಾದಂತಾಗು ವವು . ಒಂದು ದಿನಾಲು ನೂಲುವದೊಂದು ನಿಯ ಮವನ್ನೇ ಹಾಕಿಕೊಂಡರು. ಇದರಿಂದ ಮನು ಷ್ಯನು ತನಗೆ ಹತ್ತುವಷ್ಟು ಬಟ್ಟೆಬರೆಗಳನ್ನೆಲ್ಲ ಒಂದುವರ್ಷದಲ್ಲಿ ತಾನೇ ಪೂರೈಸಿಕೊಳ್ಳಬಹುದು; ಮೇಲಾಗಿ, ಒಣ ಅಂದ-ಚಂದ ಎಂಬುವ ಹುಚ್ಚೂ ಹೋಗುವದು.

ಹಿಂದುಸ್ಥಾನದೊಳಗಿನ ಬೇರೆ ಬೇರೆ ಪ್ರಾಂತ ಗಳಲ್ಲಿಯ ಬಡ ಜನರಿಗೆ ರಾಟೆಯ ಈ ಮಂತ್ರ ವನ್ನು ತಿರುಗಿ ಜಪಿಸಲು ಹೇಳುತ್ತ ಮಹಾತ್ಮರು ಕೆಲವು ತಿಂಗಳ ತಿರುಗಾಡಿದರು. ಸಾವುಕಾರರ ಹಾಗೂ ಬಡತನದ ದವಡೆಯಲ್ಲಿ ಸಿಕ್ಕು ಒದ್ದಾ ಡುವ ಅಸಂಖ್ಯ ಜನರನ್ನು ಕಂಡು ಮಹಾತ್ಮರು

ಮರುಗಿದರು. ಈ ಸಮಯದಲ್ಲಿ ಗಾಂಧಿಯವರು ಕೈಯಿಂದ ನೂತ ನೂಲಿನ ಒಂದು ಧೋತರ, ಸಾದಾ ಅಂಗಿ. ಒಂದು ಟೊಪ್ಪಿಗೆ ಇಷ್ಟನ್ನು ಮಾತ್ರ ತೊಡುತ್ತಿದರು.

ಹಿಂದುಸ್ಥಾನದಲ್ಲಿ ತಿರುಗಿದಂತೆಲ್ಲ ಬಡತನದಿಂದ ಬೆಂದ ದೇಶದಲ್ಲಿಯ ಅನೇಕ ಜೀವಂತ ಹೆಣಗ ಳನ್ನು ಕಣ್ಣಾರೆ ಕಂಡು ಕಣ್ಣೀರು ಸುರಿಸಿದರು. ಇದರಿಂದ ಅವರ ಹೊಟ್ಟೆಯಲ್ಲಿ ಮೀರಿದ ಕನವಿಸಿ ಆಯಿತು. ಹನ್ನೆರಡು ಕಾಲ ಬಡತನದಲ್ಲಿ ಬಾಳ್ವೆ ನಡಿಸುವವರಿಗೆ ಹೊಟ್ಟೆ ತುಂಬ ಅನ್ನ, ಮೈತುಂಬ ಬಟ್ಟೆ ಸಿಗುವದೆಂತು ; ಒಡ್ಡೀಪ್ರಾಂತದ ಕಡೆ ಅಡ್ಡಾ ಡುವಾಗಂತೂ ಅಲ್ಲಿಯ ಬಡವರ ಗೋಳು ನೋಡಿ ಅವರ ಕಣ್ಣುಗಳು ಕತ್ತಲೆಗುಡಿಸಿದವು. ಹರಕು-ಮುರುಕು ಗುಡಿಸಲುಗಳು, ಮೈತುಂಬ ಬಟ್ಟೆ ಕೂಡ ಇಲ್ಲದ ಹೆಂಗಸರು, ಹಸಿವೆಯಿಂದ ಬಾಯ್ಬಿ ಡುತಲಿರುವ ಕಂದಮ್ಮಗಳು ! ನೋಡಿದಲ್ಲೆಲ್ಲ ಇದೇ ನೋಟವು ಕಣ್ಣಿಗೆ ಬಿದ್ದ ಮೇಲೆ ಗಾಂಧಿಯವರು ಹೌಹಾರಿದರು. ' ದೇವಾ ? ನನ್ನ ದೇಶದ ಬಳಗ ದವರಿಗೆ ಇಷ್ಟು ಬಡತನವೇ ? ಈ ಬಡತನ ಹಿಂಗಿ

ಸಲು ನನ್ನಿಂದೇನೂ ಆಗದೇ ?' ಎಂದು ತಮ್ಮೊಳಗೆ ತಾವೇ ಮರುಗಿ ಒಬ್ಬಾಕೆಯನ್ನು ಕುರಿತು 'ಏನಮ್ಮಾ, ಮೈತುಂಬ ಉಡಲಿಕ್ಕೆ ಸೀರೆ ಇಲ್ಲದಿದ್ದರೆ ಇಲ್ಲ; ಉಟ್ಟ ಹರಕು ಕೋರಿಯನ್ನಾಗಲಿ ಚೊಕ್ಕಟವಾಗಿಡ ಲಾಗದೇ ? ಹೀಗೆ ಆಲಸ್ಯತನ ಮಾಡಬಾರದು;' ಎಂದು ಗಾಂಧಿಯವರು ನುಡಿದದ್ದನ್ನು ಆ ಹೆಂಗಸು ಕೇಳಿ, ಕೆಳಗೆ ನೋರೆ ಹಾಕಿ 'ಉಟ್ಟುಕೊಳ್ಳಲಿಕ್ಕೆ ಮತ್ತೊಂದು ಸೀರೆ ಇದ್ದರಲ್ಲವೇ ಒಂದನ್ನು ಬಿಟ್ಟು ಮತ್ತೊಂದನ್ನು ಒಗೆದು ಹಾಕುವದು ?' ಎಂದು ಬಹು ಸಣ್ಣ ನೋರೆಯಿಂದ ಆಡಿದ ಮಾತನ್ನು ಕೇಳಿ ಯಂತೂ ಗಾಂಧಿಯವರ ಎದೆಯೊಡೆದು ನೀರಾಗಿ ಕಣ್ಣಿನಿಂದ ಧಾರೆಧಾರೆಗಟ್ಟಿ ಹರಿಯಹತ್ತಿತು. ಆ ಬಡ ಹೆಂಗಸು ಮಹಾತ್ಮರಿಗೆ ಬರಿಯ ಬಡ ಹೆಂಗಸಿನಂತೆ ಕಾಣದೆ ಭಾರತಮಾತೆಯಂತೆ ಕಂಡಳು; ಆಗ ಮಹಾತ್ಮರು 'ನನ್ನ ತಾಯಿಗೆ ಮೈ ಮರ್ಯಾದೆ ಮುಚ್ಚಿಕೊಳ್ಳುವಷ್ಟು ಕೂಡ ಬಟ್ಟೆಬರೆ ಇರಬಾರದೇ ? ಏನಿದು ದುರದೃಷ್ಟ ?' ಎಂದು ನಿಂತ ಕಾಲಿನ ಮೇಲೆಯೇ 'ನನ್ನ ತಾಯಂದಿರ ಮೈಮುಚ್ಚುವ ವರೆಗೆ ನಾನು ಮೂರು ಬಟ್ಟೆಗಳನ್ನು ಬಳಸದೆ,

ಮರ್ಯಾದೆ ಮುಚ್ಚುವ ಮಟ್ಟಿಗೆ ಒಂದು ಲುಂಗಿ ಯನ್ನು ಮಾತ್ರ ಸುತ್ತಿಕೊಳ್ಳುವೆ' ಎಂದು ಪಣ ಕಟ್ಟಿ ದರು; ಮತ್ತು ಇಂಥ ದರಿದ್ರನಾರಾಯಣರನ್ನು ಕಂಡು ಅವರನ್ನು ಪೂಜೆ ಮಾಡಿ, ಇಂಥವರ ಉದ್ಧಾ ರಕ್ಕಾಗಿಯೇ ಜೀವದಿಂದಿರುವವರೆಗೆ ಪ್ರಯತ್ನಿಸುವೆ ನೆಂದೂ ದೇವರ ಆಣೆ ಇಟ್ಟುಕೊಂಡರು.

---

## ೨೦. ಹೊಲೆಯರು ನಮ್ಮ ಅಣ್ಣ ತಮ್ಮಂದಿರು

ಆಫ್ರಿಕದಲ್ಲಿದ್ದಾಗ ಅಲ್ಲಿಯ ಯುರೋಪಿಯರು ಹಿಂದೀ ಜನರನ್ನು ಕೂಲಿಯವರೆಂದು ಜರಿಯುತ್ತಿದ್ದುದನ್ನು ಮಹಾತ್ಮರು ಸ್ವತಃ ಅನುಭವಗಂಡಿದ್ದರು; ಅವರ ಕೈಯಲ್ಲಿ ತಾವು ಕಷ್ಟ ಪಟ್ಟಿದ್ದರು; ಅದೇ ತರದ ಕಷ್ಟವು ಹಿಂದುಸ್ಥಾನದ ಲ್ಲಿಯ ಹೊಲೆಮಾದಿಗರಿಗೆ ಆಗುತ್ತಿರುವದನ್ನು ಕಂಡು

ಮಹಾತ್ಮರಿಗೆ ಬಹಳ ದುಃಖವಾಯಿತು. ಹೊಲೆಯರು ನಮ್ಮ ಅಣ್ಣತಮ್ಮಂದಿರು; ಅವರನ್ನು ಮುಟ್ಟಿಸಿಕೊಂಡರೆ ಮೈಲಿಗೆ ಆಗುವದು ಎಂಬದು ಎಲ್ಲಿಯ ನ್ಯಾಯ? ನಮ್ಮನ್ನು ಮುಟ್ಟಬೇಡಿರಿ, ದೂರಕ್ಕೆ ನಿಲ್ಲಿರಿ! ಹೀಗನ್ನುವಾಗ ಅವರ ಮನವು ಎಷ್ಟು ನೋಯಬಹುದು? ನಿಜವಾಗಿ ನಮ್ಮವರೇ ಆದ ಹೊಲೆಯರ ಹೊಲಸುತನವನ್ನು ನಾವು ಬಿಡಿಸಿ ಅವರನ್ನು ಒಳ್ಳೇ ದಾರಿಗೆ ಹಚ್ಚಲಿಕ್ಕೆ ಬೇಕು. ನಮ್ಮವರನ್ನೇ ಹಿಂದಿಟ್ಟು ನಾವು ಮುಂದೆ ಹೋಗುವದರಲ್ಲಿ ದೊಡ್ಡಸ್ತನವಿಲ್ಲ; ಹೀಗೆ ಅಂದುಕೊಂಡು ಮಹಾತ್ಮರು ಹಿಂದುಸ್ಥಾನಕ್ಕೆ ಬಂದ ನಂತರ ಹೊಲೆಯರನ್ನು ಮುಟ್ಟಿದರೆ ಮೈಲಿಗೆ ಎನ್ನುವ ಜನರ ವಿಚಾರವನ್ನೇ ಬದಲಿಸಿದರು; ಹೊಲೆಯರಿಗೆ ಸ್ವಚ್ಛವಾಗಿ ಇರಲಿಕ್ಕೆ ಹೇಳಿದರು; ತಾವು ಸ್ವತಃ ಅನಾಥಳಾದ ಒಂದು ಹೊಲೆಯರ ಹುಡಿಗೆಯನ್ನು ಮಗಳಂತೆ ಸಾಕಿ ಸಲಹಿದರು.

ಹೊಲೆಯನಿಂದ ನಮ್ಮ ಊರು, ನಮ್ಮ ಬೀದಿಗಳು, ನಮ್ಮ ಮನೆಯ ಅಂಗಳವು ಸ್ವಚ್ಛವಾಗುತ್ತವೆ; ಇಂಥವರಿಗೆ ನಾವು ಕೊಡುವದೇನು? ತಂಗಳ

ಬಂಗಳ ಹಳಸಿದ ಅನ್ನ, ಎಂಜಲು ಎಲೆ. ಹೀಗೆ ನಮ್ಮ ದೇಶದಲ್ಲಿಯು ಅಣ್ಣ ತಮ್ಮಂದಿರನ್ನೇ ನಾವು ಹೀನರೆಂದು ಕಂಡ ಮೇಲೆ ಪರಕೀಯರು ನಮ್ಮನ್ನು ಕೂಲಿಯುವರೆಂದು ತಿಳಿದರೆ ತಪ್ಪೇನು? ಆದ್ದರಿಂದ ನಾವು ಅವರನ್ನು ಮುಟ್ಟಲು ತಿಳಿ ಹೇಳಿ, ಸುಧಾರಿಸಲಿಕ್ಕೆಬೇಕು. 'ನನ್ನ ಮೇಲೆ ಅಂತಃಕರಣವಿದ್ದರೆ, ದೇವರು ನನ್ನನ್ನು ಮುಂದಿನ ಜನ್ಮದಲ್ಲಿ ಹೊಲೆಯುನನ್ನು ಮಾಡಲಿ' ಎಂದು ಮಹಾತ್ಮರು ಆಗಾಗ್ಗ ಅನ್ನುವರು. ಕೀಳರ ಬಗ್ಗೆ ಕನಿಕರ, ಕೀಳುತನ ಅಂದರೆ ಮೇಲುತನ, ಕೀಳುತನದಲ್ಲಿಯೇ ಸುಖ, ಆದ್ದರಿಂದ ನನಗೆ ಕೀಳುತನವೇ ಇರಲಿ ಎಂಬುದೇ ಮಹಾತ್ಮರ ಹೇಳಿಕೆ.

---

## ೨೧ ಗಾಂಧಿಯುವರ ಸ್ವರಾಜ್ಯ

ಸ್ವರಾಜ್ಯವೆಂದರೆ, ನಮ್ಮ ಕೈಯೊಳಗಿನ ರಾಜ್ಯ. ನಮ್ಮ ಮನೆಯನ್ನು ನಾವು ಆಳುವಂತೆ, ನಮ್ಮ ದೇಶವನ್ನು ನಾವು ಆಳುವದೇ

ಸ್ವರಾಜ್ಯ; ಹೀಗೆ ಪ್ರತಿಯೊಂದು ದೇಶವು ಆಯಾ ದೇಶದವರ ಕೈಯಲ್ಲಿರುವದೇ ಸ್ವರಾಜ್ಯ.

ಸ್ವರಾಜ್ಯವೆಂದರೆ, ನಮ್ಮಲ್ಲಿಯ ಪ್ರತಿಯೊಬ್ಬರಿಗೆ ಹೊಟ್ಟೆತುಂಬ ಅನ್ನ, ಮೈತುಂಬ ಬಟ್ಟೆ, ಇರಲಿಕ್ಕೆ ಆರೋಗ್ಯವಾದ ಮನೆ, ಅಗ್ಗವಾದ ಶಿಕ್ಷಣ, ಇವು ತಪ್ಪದೆ ಸಿಗುವದು ಎಂಬ ಅರ್ಥ. ಇವಿಷ್ಟನ್ನು ಪ್ರತಿಯೊಬ್ಬರಿಗೆ ದೊರಕಿಸಿ ಕೊಡುವದೇ ಗಾಂಧಿಯವರ ಗುರಿ. ಇದಕ್ಕಾಗಿಯೇ ಗಾಂಧಿಯವರು ಪ್ರಯತ್ನಿಸುವದು.

---

## ೨೨. ಅಹಿಂಸೆ

ಯಾರನ್ನೂ ಯಾವ ಬಗೆಯಿಂದಲೂ ನೋಯಿಸದಿರುವದೇ ಅಹಿಂಸೆ. ಇದೊಂದು ದೊಡ್ಡ ವ್ರತ. ಮಹಾತ್ಮರು ಇದನ್ನು ತಮ್ಮ ಜೀವಮಾನದ ಬೀಜಮಂತ್ರವನ್ನಾಗಿ ಮಾಡಿಕೊಂಡಿರುವರು. ಪ್ರಾಣ ಹೋದರೂ ಅವರು

ಯಾರನ್ನೂ ಕೃತಿಯಿಂದ ಮಾತಿನಿಂದ ಮನಸಿನಿಂದ ನೋಯಿಸುವದಿಲ್ಲ. ಒಬ್ಬರನ್ನು ನೋಯಿಸಿ ಬಾಳು ವದಕ್ಕಿಂತ ನಾವೇ ಸಾಯುವದು ಲೇಸು, ಮತ್ತು ಈ ವ್ರತವನ್ನು ನಾವು ಕೈಕೊಂಡು ಅದರಂತೆ ಕೆಲ ದಿನ ನಡೆದರೆ, ವೈರಿಗಳು ಕೂಡ ಗೆಳೆಯರಾಗುವರು ಎಂದು ಅವರ ಅಂಬೋಣ ಈ ಹೊತ್ತು ಮಹಾತ್ಮರು ಸ್ವರಾಜ್ಯಕ್ಕಾಗಿ ಇಂಗ್ಲೀಷರ ಸಂಗಡ ಹೋರಾಡುತ್ತಿದ್ದರೂ, ಅವರಲ್ಲಿ ಇಂಗ್ಲೀಷರ ವಿಷಯಕ್ಕೆ ಎಳ್ಳಷ್ಟೂ ದ್ವೇಷ ವಿಲ್ಲ. ತಮ್ಮ ಅಣ್ಣ ತಮ್ಮಂದಿರಿಗಿಂತ ಅವರನ್ನು ಹೆಚ್ಚು ಪ್ರೀತಿಸುವರು. ಈ ತೆರದ ಅಹಿಂಸೆ. ಮತ್ತು ಎಲ್ಲರನ್ನು ಪ್ರೀತಿಸುವದರಿಂದಲೇ ಹಿಂದುಸ್ಥಾನಕ್ಕೆ ಒಳ್ಳೇ ದಿನ ಗಳು ಬರುವವು ಎಂಬುದು ಮಹಾತ್ಮರ ಸಿದ್ಧಾಂತ.

ಕೊನೆಯ ಮಾತು-ಗಾಂಧೀಯವರ ವಿಷಯಕ್ಕೆ ಇಷ್ಟು ಮುಖ್ಯ ಮಾತುಗಳನ್ನು ನಿಮಗೆ ಹೇಳಿದೆನು. ನೀವಾದರೂ ಗಟ್ಟಿ ಮನಸ್ಸು ಮಾಡಿ, ಅವರಂತೆ ನಡೆದರೆ, ನೀವೂ ದೊಡ್ಡವರೆಂದು ಹೊಗಳಿಸಿಕೊಳ್ಳುವಿರಿ. ಅಂಥ ಸದ್ಬುದ್ಧಿಯನ್ನೂ ಸಾಮರ್ಥ್ಯವನ್ನೂ ದೇವರು ನಿಮಗೆ ದಯಪಾಲಿಸಲೆಂದು ಪ್ರಾರ್ಥಿಸುತ್ತೇನೆ.

---

Vasant Printing Works
DHARWAR